ಉಚಿತ ಪ್ರತಿಗಳಿಗಾಗಿ ಮತ್ತು ಉಚಿತ ಪತ್ರಿಕೆಗಳಿಗಾಗಿ
ನಮ್ಮ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಿ




ಸತ್ಯವೇದದಲ್ಲಿನ ವಿಷಯಗಳ ಬಗ್ಗೆ ಹೆಚ್ಚಿನ ವಿವರ ಹಾಗೂ ಅಂಚೆ ಮೂಲಕ ಉಚಿತವಾಗಿ ಪಾಠಗಳನನ್ನು ಪಡೆಯಲಿಚ್ಛಿಸುವವರು ಈ ಕೆಳಗಿನ ವಿಳಸಾಕೆ ಪತ್ರ ಬರೆಯಬಹುದು

ನಮ್ಮ ವಿಳಾಸ :
ದ ಕ್ರಿಸ್ಟಡೆಲ್ಫಿಯನ್ಸ್
ಅಂಚಿ ಪೆಟ್ಟಿಗೆ ಸಂಖ್ಯೆ 535, ಫ್ರೇಜರ್ ಟೌನ್
ಬೆಂಗಳೂರು - 560 005



# ನೂತನ ಸೃಷ್ಟಿ

ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವುದು

ಸಂಚಿಕೆ 15

* ಒತ್ತಡವನ್ನು ಕಡಿಮೆಮಾಡುವ 36 ವಿಷಯಗಳು
* ಹೊಸದಾಗಿ ಹುಟ್ಟುವುದು
* ದೇವರ ವಾಗ್ದಾನಗಳಿಗೆ ಆಧಾರ
* ಕೃತ್ಯಗಳು ಮಾತಾಡುತ್ತವೆ......
* ಘರೋಹನ ಪಾನ ಸೇವಕ

## ಕ್ರಿಸ್ಟಡೆಲ್ಫಿಯನ್ನರು ಎಂದರೆ ಯಾರು?

ಕ್ರಿಸ್ಟಡೆಲ್ಫಿಯನ್ ಎಂಬ ಪದ ಮೂಲತಃ ಗ್ರೀಕ್ ಭಾಷೆಯ ಎರಡು ಪದಗಳಿಂದ ಬಂದಿದೆ, ಅವುಗಳೆಂದರೆ 'ಕ್ರೈಸ್ಟ್' ಮತ್ತು 'ಅಡೆಲ್ಫೊಸ್' ಅವುಗಳ ಸರಳ ಅರ್ಥವೆಂದರೆ **"ಕ್ರಿಸ್ತನ ಸಹೋದರರು"**ಎಂಬುದಾಗಿದೆ. ಕ್ರಿಸ್ಟಡೆಲ್ಫಿಯನ್ನರು ಪ್ರಪಂಚದಲ್ಲೆಲ್ಲ ಒಂದೇ ಸಮೂಹವಾಗಿದ್ದು, ಸತ್ಯವೇದವು ಒಬ್ಬನೇ ಸತ್ಯದೇವರಿಂದ ಬರೆಸಲ್ಪಟ್ಟಿದ್ದು ಅದನ್ನೇ ಅಧಾರವಾಗಿ ಜೀವನವನ್ನು ನೆಡೆಸುವವರಾಗಿದ್ದೇವೆ.

ನಾವು ಯೇಸು(ದೇವರ ಒಬ್ಬನೇ ಮಗ)ಭೂಲೋಕಕ್ಕೆ ಸರ್ವ ಅಧಿಕಾರವುಳ್ಳವನಾಗಿ ಹಿಂತಿರುಗಿ ಬರುತ್ತಾನೆ ಮತ್ತು ಭೂಲೋಕಕ್ಕೆ ನ್ಯಾಯ, ನೀತಿ ಮತ್ತು ಶಾಂತಿಯನ್ನು ಉಂಟುಮಾಡುತ್ತಾನೆ. ಇಲ್ಲಿನ ಎಲ್ಲಾರೀತಿಯ ಅಸಮಾನತೆ, ಅಶಾಂತಿ, ರಕ್ತಪಾತಗಳನ್ನು ಕೊನೆಗಾಣಿಸುತ್ತಾನೆ ಎಂದು ನಂಬುತ್ತೇವೆ.

ನಾವುಗಳು ಮರಣವನ್ನು ಹೊಂದಿದರೂ ಸಹ ಯೇಸುಕ್ರಿಸ್ತ ನಮ್ಮನ್ನು ಮರಣದಿಂದ ಎಬ್ಬಿಸಿ ನ್ಯಾಯತೀರ್ಪು ಕೊಡುತ್ತಾನೆ. ನಾವು ದೇವರ ವಾಕ್ಯಗಳಿಗೆ ಅವಿಧೇಯರಾಗಿ, ಕೆಟ್ಟವರಾಗಿ, ದೇಹದ ಆಶೆಗಳಿಗೆ ಅನುಗುಣವಾಗಿ ನಡೆದಿದ್ದರೆ ಮರಣವನ್ನು ಕೊಡುತ್ತಾನೆ, ಆದರೆ ನಾವು ದೇವರ ವಾಕ್ಯಗಳನ್ನು ನಂಬಿ ಅವುಗಳನ್ನೇ ಅನುಸರಿಸಿ ನಡೆದರೆ ನಿತ್ಯಜೀವ ಕೊಡುತ್ತಾನೆ ಎಂದು ನಂಬುತ್ತೇವೆ. ನಾವು ಒಬ್ಬ ಮಾನವನು ಜೀವವನ್ನು ಪಡೆಯಬೇಕಾದರೆ ಬಹಳ ಮುಖ್ಯವಾಗಿ ಎರಡು ಆಜ್ಞೆಗಳನ್ನು ಅನುಸರಿಸಲೇಬೇಕು ಎಂದು ನಂಬುತ್ತೇವೆ, ಅವುಗಳೆಂದರೆ: (1)ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದ ಪ್ರೀತಿಸಬೇಕು ಮತ್ತು ಆತನನ್ನೊಬ್ಬನನ್ನೆ ಆರಾಧಿಸಬೇಕು, ಮತ್ತು (2)ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬವುಗಳೇ.

### ನೂತನ ಸೃಷ್ಟಿ ಪತ್ರಿಕೆಯ ತಂಡ

ಲೀನಸ್ ಡ್ಯಾನಿಯಲ್ : ಸಂಯೋಜಕರು.

ಸುಧೀರ್ ಬಿ.ಜಿ : ಪುನರವಲೋಕನ, ಮತ್ತು ಡಿ.ಟಿ.ಪಿ ಸಂಯೋಜಕರು.

ರೀಟಾ ಸತ್ಯರಾಜ್
ಜಾನ್ ಮದನ್
ಜೇಮ್ಸ್.ಡಿ
ಕಿರಣ್
} ಭಾಷಾಂತರಕಾರರು


**Co-ordinator : Linus Daniel**

**e-mail :**
**info@choose2live.info**
http://www.choose2live.info/noothana_shristi

**Contact:**
The Christadelphians,
P.O.Box No 535,
Bangalore 560 005,
India.


ನಿಮ್ಮನ್ನು ಈ ಪತ್ರಿಕೆಯ ಮೂಲಕ ದೇವರ ವಾಕ್ಯಗಳಲ್ಲಿ ಉತ್ತೇಜಿಸುವ ಒಂದು ಪ್ರಯತ್ನ ನಮ್ಮದಾಗಿದೆ, ನೀವು ಇದರ ಮೂಲಕ ಆತ್ಮೀಕವಾಗಿ ಪೋಷಣೆಹೊಂದಬಹುದಾಗಿದೆ ಮತ್ತು ನಿಮ್ಮನ್ನು ಉನ್ನತ ಸ್ಥಿತಿಗೆ ತರಲು ಸಹಕಾರಿಯಾಗಿದೆ. ಸತ್ಯವೇದವನ್ನು ಓದಲು ನಾವು ಉತ್ತೇಜಿಸುತ್ತೇವೆ, ಏಕಂದರೆ ಸತ್ಯವೇದವು ನಿಮ್ಮನ್ನು ವಿವೇಕಿಗಳಾಗಿ ಮಾಡುವುದರ ಜೊತೆಗೆ ನಿಮ್ಮ ರಕ್ಷಣೆಗೆ ಮಾರ್ಗಸೂಚಿಯಾಗಿದೆ.

ಈ ಪತ್ರಿಕೆಯಲ್ಲಿರುವ ಎಲ್ಲಾ ವಸ್ತುವಿಷಯಗಳನ್ನು ಕ್ರಿಸ್ಟಡೆಲ್ಫಿಯನ್ನರ ಆಂಗ್ಲ ಭಾಷೆಯ ವಿಷಯಗಳಿಂದ ಕನ್ನಡಕ್ಕೆ ಭಾಷಾಂತರಿಸಿದೆ.

*"ಹೀಗಿರಲಾಗಿ ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು; ಇಗೋ ಪೂರ್ವಸ್ಥಿತಿ ಹೋಗಿ ಎಲ್ಲಾ ನೂತನವಾಯಿತು."[2ಕೊರಿಂಥ 5:17]*



# ಒತ್ತಡವನ್ನು ಕಡಿಮೆಮಾಡುವ 36 ವಿಷಯಗಳು



01. ಪ್ರಾರ್ಥಿಸು.
02. ಸಮಯಕ್ಕೆ ಸರಿಯಾಗಿ ನಿದ್ರೆ ಮಾಡು.
03. ಸಮಯಕ್ಕೆ ಸರಿಯಾಗಿ ಎದ್ದೇಳು, ಇದರಿಂದ ದಿವಸವನ್ನು ಯಾವ ಜಗ್ಗಾಟವಿಲ್ಲದೆ ಪ್ರಾರಂಭಿಸಲು ಸಾಧ್ಯವಾಗುತ್ತದೆ.
04. ನಿನ್ನ ವೇಳಾಪಟ್ಟಿಗೆ ಹೊಂದಾಣಿಕೆಯಾಗದ ಅಥವಾ ನಿನ್ನ ಮನಸ್ಸಿನ ಆರೋಗ್ಯವನ್ನು ಕುಂಠಿತಗೊಳಿಸುವ ಯೋಜನೆಗಳಿಗೆ ಒಪ್ಪಿಗೆ ಕೊಡಬೇಡ.
05. ಬೇರೆಯವುಗಳನ್ನು ಸಾಧ್ಯಗೊಳಿಸಲು, ಕೆಲಸಗಳನ್ನು ಸರಿಯಾಗಿ ನಿಯೋಗಿಸು.
06. ನಿನ್ನ ಜೀವಿತವನ್ನು ಸರಳಗೊಳಿಸು ಮತ್ತು ಗೊಂದಲಗಳಿಂದ ಮುಕ್ತಗೊಳಿಸು.
07. ಸ್ವಲ್ಪವೇ ಹೆಚ್ಚಿರುತ್ತದೆ(ಹಲವೊಮ್ಮೆ ಒಬ್ಬರು ಸಾಲದಿದ್ದರೂ, ಹಲವೊಮ್ಮೆ ಇಬ್ಬರು ಅತ್ಯಧಿಕವಾಗಿರುವರು).
08. ವಿಷಯಗಳನ್ನು ಸಾಧಿಸಲು ಮತ್ತು ಸ್ಥಳಗಳನ್ನು ತಲುಪಲು ಹೆಚ್ಚಿನ ಸಮಯವನ್ನು ಅನುಮತಿಸು.
09. ನಿನ್ನನ್ನು ಸಮವಾಗಿ ನೆಡೆಸಿಕೋ. ದೊಡ್ಡ ಬದಲಾವಣೆಗಳನ್ನು ಮತ್ತು ಕಷ್ಟದ ಯೋಜನೆಗಳನ್ನು ಅವುಗಳಿಗೆ ಬೇಕಾಗುವ ಸಮಯಕ್ಕೆ ಹಂಚಿಕೊಂಡು ಸಾಧಿಸು. ಕಷ್ಟದ ವಿಷಯಗಳನ್ನು ಒಟ್ಟಾಗಿ ರಾಶಿಮಾಡಿಟ್ಟುಕೊಳ್ಳಬೇಡ.
10. ಒಮ್ಮೆಗೆ ಒಂದು ದಿವಸವನ್ನು ತೆಗೆದುಕೋ.
11. ಚಿಂತೆಗಳನ್ನು ವಿಷಯಗಳಿಂದ ಬೇರ್ಪಡಿಸು. ಸಂದರ್ಭವೇ ಚಿಂತೆಯಾಗಿದ್ದಲ್ಲಿ, ನೀನು ಏನು ಮಾಡಬೇಕೆಂಬುದನ್ನು ದೇವರಲ್ಲಿ ಹುಡುಕು ಮತ್ತು ಆತಂಕವನ್ನು ಬಿಟ್ಟುಬಿಡು. ಒಂದುವೇಳೆ ಸಂದರ್ಭದ ಬಗ್ಗೆ ನಿನಗೆ ಏನನ್ನೂ ಮಾಡಲಾಗದಿದ್ದಲ್ಲಿ, ಅದನ್ನು ಮರೆತು ಬಿಡು.
12. ನಿನ್ನ ಆದಾಯಕ್ಕೆ ತಕ್ಕಂತೆ ಜೀವಿಸು; ಕಡಿಮೆ ಬೆಲೆಯವುಗಳನ್ನು ಕೊಂಡುಕೊಳ್ಳಲು ಕ್ರೆಡಿಟ್ ಕಾರ್ಡುಗಳನ್ನು ಬಳಸಬೇಡ.
13. ಹೆಚ್ಚಾಗಿ ಹೊಂದಿಸಿಕೊಂಡಿರು; ನಿನ್ನ ಚೀಲದಲ್ಲಿ ಒಂದು ಹೆಚ್ಚಾದ ವಾಹನದ ಕೀಲಿಕೈ, ಮನೆಯ ತೋಟದ ಕೀಲಿಕೈ, ಮನೆಯ ಕೀಲಿಕೈ, ಅಂಚೆ ಚೀಟಿಗಳು ಮತ್ತು ಮುಂತಾದವುಗಳನ್ನು ಸ್ವಲ್ಪ ಹೆಚ್ಚಾಗಿ ಇಟ್ಟುಕೊ.

14. “ಬಾಯನ್ನು ಮೌನವಾಗಿ ಕಾಪಾಡಿಕೊ” ಈ ಚಿಕ್ಕ ಬುದ್ಧಿಮಾತು, ಆಗಬಹುದಾದ ದೊಡ್ಡ ತೊಂದರೆಯನ್ನು ತಪ್ಪಿಸುತ್ತದೆ.
15. ನಿನ್ನಲ್ಲಿರುವ ಮಕ್ಕಳಿಗೆ ಪ್ರತಿದಿನವೂ ಏನಾದರೂ ಸ್ವಲ್ಪವಾದರೂ ಮಾಡು.
16. ಸರತಿ ಸಾಲಿನಲ್ಲಿ ಕಾಯುವ ವೇಳೆಗಳಲ್ಲಿ ಓದಲು ನಿನ್ನ ಜೊತೆ ಸತ್ಯವೇದವನ್ನು ಇಟ್ಟುಕೊ.
17. ನಿನ್ನ ಶರೀರಕ್ಕೆ ತಕ್ಕಷ್ಟು ವ್ಯಾಯಾಮವನ್ನು ಮಾಡು.
18. ಸರಿಯಾಗಿ(ಸಮತೋಲನ ಆಹಾರ) ತಿನ್ನು.
19. ಎಲ್ಲದಕ್ಕೂ ತಕ್ಕ ಅವಕಾಶ ಸಿಗಬೇಕೆಂದು, ಎಲ್ಲವನ್ನೂ ಸರಿಯಾಗಿ ನಿಯೋಜಿಸು.
20. ವಾಹನದಲ್ಲಿ ಚಲಿಸುವ ಸಮಯಗಳಲ್ಲಿ ಒಳ್ಳೆಯ ಸಂಗೀತವನ್ನು ಆಲಿಸು, ಇದರಿಂದ ನಿನ್ನ ಜೀವನದ ಮನಶ್ಯಕ್ತಿ ಚೆನ್ನಾಗಿರುತ್ತದೆ.
21. ನಿನಗೆ ಬರುವ ಯೋಚನೆಗಳನ್ನು ಮತ್ತು ಆತ್ಮಪ್ರೇರಣಾ ವಿಷಯಗಳನ್ನು ಬರೆದಿಟ್ಟುಕೊ.
22. ಪ್ರತಿದಿನವೂ ಸ್ವಲ್ಪಹೊತ್ತು ಏಕಾಂಗಿಯಾಗಿ ಇರುವುದಕ್ಕೆ ಸಮಯವನ್ನು ಕಾದಿರಿಸಿಕೊ.
23. ಸಮಸೆಯಗಳಿವೆಯೋ? ಅದೇ ಸಂದರ್ಭಗಳಲ್ಲಿ ದೇವರೊಟ್ಟಿಗೆ ಮಾತನಾಡು. ಸಮಸ್ಯೆಗಳನ್ನು ಮೊಳಕೆಯಲ್ಲಿಯೇ ಕತ್ತರಿಸಲು ಪ್ರಯತ್ನಿಸು. ಸಮಸ್ಯೆಗಳು ದೊಡ್ಡದಾಗಿ, ನೀನು ಹೋರಾಡಿ ಪ್ರಾರ್ಥಿಸಲು ರಾತ್ರಿ ಮಲಗುವ ವೇಳೆ ಬರುವವರೆಗೂ ಕಾಯಬೇಡ.
24. ದೇವಜನರೊಂದಿಗೆ ಸ್ನೇಹವಿಟ್ಟುಕೊ.
25. ನಿನಗೆ ಪ್ರಿಯವಾಗಿರುವ ಸತ್ಯವೇದದ ವಾಕ್ಯಗಳ ಪ್ರತಿಯನ್ನು ನಿನ್ನ ಹತ್ತಿರ ಇಟ್ಟುಕೊ.
26. ಜ್ಞಾಪಕಮಾಡಿಕೋ, ನಿರಾಶೆಗೂ ಮತ್ತು ನಿರೀಕ್ಷೆಗೂ ನಡುವಿನ ಅತಿಚಿಕ್ಕ ಸೇತುವೆಯು ಹಲವು ಬಾರಿ ಒಳ್ಳೇದೇ, “ನಿನಗೆ ಸ್ತೋತ್ರ ಪ್ರಿಯ ಕರ್ತನೇ!”
27. ಹರ್ಷಿಸಿ ನಗು.
28. ಇನ್ನೂ ಹೆಚ್ಚಾಗಿ ನಗು.
29. ನಿನ್ನ ಕೆಲಸವನ್ನು ಗಂಭೀರವಾಗಿ ತೆಗೆದುಕೊ, ಆದರೆ ನಿನ್ನನ್ನು ನೀನೇ ಗಂಭೀರವಾಗಿ ತೆಗೆದುಕೊಳ್ಳಬೇಡ.
30. ಕ್ಷಮಿಸುವ ಗುಣವನ್ನು ಬೆಳಿಸಿಕೋ(ಬಹಳ ಜನ ತಾವು ಮಾಡಬಹುದಾದ ಅತ್ಯುತ್ತಮ ವಾದದ್ದನ್ನೇ ಮಾಡುತ್ತಿದ್ದಾರೆ).
31. ದಯೆ ಇಲ್ಲದವರಿಗೂ ದಯೆಯುಳ್ಳವನಾಗಿರು(ಅವರಿಗೇ ಇದು ಅತ್ಯಗತ್ಯವಿರಬಹುದು).
32. ನಿನ್ನ ಅಹಂನಲ್ಲಿ ಕೂತುಕೋ.
33. ಸ್ವಲ್ಪವೇ ಮಾತನಾಡು; ಹೆಚ್ಚಾಗಿ ಆಲಿಸು.
34. ನಿಧಾನಿಸು.
35. ಜ್ಞಾಪಕಮಾಡಿಕೋ, ನೀನೇ ಜಗತ್ತಿನ ಪ್ರಧಾನ ನಿರ್ವಾಹಕನಲ್ಲ. ಒಬ್ಬನು ನಿರ್ವಹಿಸುತ್ತಿರುವನು, ಆತನೇ ನಿರ್ವಹಿಸುವನು!
36. ಪ್ರತಿದಿನ ರಾತ್ರಿಯೂ ಮಲಗುವ ಮುನ್ನ, ನೀನು ಒಂದು ವಿಷಯದಲ್ಲಿ ಈ ಹಿಂದೆ ಎಂದಿಗೂ ಮಹತ್ವವುಳ್ಳವನಾಗಿರದೆ, ಆ ದಿನದಲ್ಲಿ ಮಹತ್ವವುಳ್ಳವನಾಗಿರುವ ಒಂದು ವಿಷಯವನ್ನು ಯೋಚಿಸು.



# ಹೊಸದಾಗಿ ಹುಟ್ಟುವುದು

## ದೀಕ್ಷಾಸ್ನಾನ



ಮನುಷ್ಯ ತನ್ನ ನೈಸರ್ಗಿಕ ಸ್ಥಿತಿಯಲ್ಲಿ ಮರಣಕ್ಕೆ ಮಾತ್ರ ಉತ್ತರಾಧಿಕಾರಿಯಾಗಿರುತ್ತಾನೆ. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಅವನು ಮರಣವನ್ನು ತನ್ನ ಪಾಪಗಳಿಗೆ “ಸಂಬಳ”ವಾಗಿ ಸಂಪಾದಿಸುತ್ತಾನೆ(ರೋಮಾಪುರದವರಿಗೆ 6:23). ಸಾವಿನಿಂದ ತಪ್ಪಿಸಿಕೊಳ್ಳಲು ಇರುವ ಒಂದೇ ಉಪಾಯವೆಂದರೆ ಸತ್ತುಹೋಗುವುದೇ! ದೀಕ್ಷಾಸ್ನಾನ ಹೊಂದುವಾಗ ವಿಶ್ವಾಸಿಯಾದವನು ಇದನ್ನೇ ಮಾಡುತ್ತಾನೆ–“ಕ್ರಿಸ್ತ ಯೇಸುವಿನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನೀವೆಲ್ಲರೂ ಆತನ ಮರಣದಲ್ಲಿ ಪಾಲುದಾರರಾಗುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವೆಂದು ನಿಮಗೆ ತಿಳಿಯದೋ?.......ಸತ್ತವನು ಪಾಪದ ವಶದಿಂದ ಬಿಡುಗಡೆ ಹೊಂದಿದ್ದಾನಷ್ಟೆ” (ರೋಮಾಪುರದವರಿಗೆ 6:3, 7).

ಆದರೆ ನಿಜವಾದ ದೀಕ್ಷಾಸ್ನಾನವು ಕೇವಲ ಒಂದು ಯಾಂತ್ರಿಕ ಕ್ರಿಯೆಗಿಂತ ಹೆಚ್ಚಿನದು. ದೀಕ್ಷಾಸ್ನಾನವು ಪಡೆಯುವ ಮೊದಲು ವಿಶ್ವಾಸದಿಂದಲೂ, ಪಡೆದಾದ ನಂತರ ವಿಧೇಯತೆಯಿಂದಲೂ ಮಾನ್ಯತೆ ಹೊಂದುತ್ತದೆ. ಹಾಗಿಲ್ಲವಾದರೆ ಅದೊಂದು ಅರ್ಥಶೂನ್ಯ ತೋರಿಕೆಯಷ್ಟೆ. ಆದರೆ ಅದು ಕೇವಲ ನಿರೀಕ್ಷೆಯೇ ಆದರೂ ಮರಣದಿಂದ ಪಾರಾದವರಿಗೆ ಎಂಥ ಆಶೀರ್ವಾದ! “ಆದುದರಿಂದ ಕ್ರಿಸ್ತೇಸುವಿನಲ್ಲಿರುವವರಿಗೆ ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ, ಯಾಕಂದರೆ ಜೀವವನ್ನುಂಟುಮಾಡುವ ಪವಿತ್ರ ಶಕ್ತಿಯಿಂದಾದ ನಿಯಮವು ನಿನ್ನನ್ನು ಪಾಪಮರಣಗಳಿಗೆ ಕಾರಣವಾದ ನಿಯಮದಿಂದ ಕ್ರಿಸ್ತೇಸುವಿನ ಮೂಲಕ ಬಿಡಿಸಿತು” (ರೋಮಪುರದವರಿಗೆ 8:1–2).

ಪಾಪದ ಮತ್ತು ಮರಣದ ನಿಯಮದಿಂದ ದೇವರು ಕ್ರಿಸ್ತನ ಮೂಲಕ ನಮ್ಮನ್ನು ಹೇಗೆ ಬಿಡಿಸಿದ್ದಾನೆ?

“ನಮ್ಮ ಶರೀರಾಧೀನ ಸ್ವಭಾವದ ನಿಮಿತ್ತ ನಿರ್ಬಲವಾಗಿ ಯಾವ ಕೆಲಸವನ್ನು ಮಾಡಲಾರದೆ ಇತ್ತೋ ಅದನ್ನು ದೇವರೇ ಮಾಡಿದನು. ಏಕಂದರೆ ಆತನು ಪಾಪನಿವಾರಣೆಗಾಗಿ ತನ್ನ ಮಗನನ್ನು ಪಾಪಾಧೀನವಾದ ನರಭಾವದ ರೂಪದಲ್ಲಿ ಕಳುಹಿಸಿಕೊಟ್ಟು ನರಭಾವದಲ್ಲಿಯೇ

ಪಾಪಕ್ಕೆ ಮರಣದಂಡನೆಯನ್ನು ವಿಧಿಸಿದನು'' (ರೋಮಪುರದವರಿಗೆ 8:3).

ಮನುಷ್ಯನನ್ನು ದಾಸತ್ವದಿಂದ ಬಿಡಿಸಲು ದೇವರು ಇಟ್ಟ ಮೊದಲ ಹೆಜ್ಜೆಯೆಂದರೆ ಮನುಷ್ಯನ ಹೋಲಿಕೆಯಲ್ಲಿ ನಮ್ಮ ಶರೀರಭಾವದಲ್ಲಿಯೇ ಒಬ್ಬ ಮಗನನ್ನು ಹುಟ್ಟಿಸುವುದಾಗಿತ್ತು. ಮನುಷ್ಯನಾಗಿಯೂ ಶರೀರಭಾವಕ್ಕೆ ಅನುಸಾರವಾಗಿ ನಡೆಯದೆ(ವಚನ 4) ಪವಿತ್ರಾತ್ಮಾನುಸಾರ ನಡೆಯುವವನಾಗಿ, ಪವಿತ್ರಾತ್ಮನಿಗೆ ಸಂಬಂಧ ಪಟ್ಟವುಗಳ ಮೇಲೆ(ವಚನ 5) ನಾವು ಮನಸ್ಸಿಡುವಂತೆ ನಮಗೆ ಉದಾಹರಣೆಯಾಗಲು ಬಂದದ್ದು ಈತನೇ.

ಕ್ರಿಸ್ತನ ಉದಾಹರಣೆಯನ್ನು ಅನುಸರಿಸುವಲ್ಲಿ ನಾವು ಮರುಹುಟ್ಟು ಪಡೆಯುತ್ತೇವೆ. ನಾವು ಶರೀರಭಾವದಲ್ಲಿಯೇ ಇದ್ದರೂ–ಸದ್ಯಕ್ಕಂತೂ ಇದು ಬದಲಾಗುವುದಿಲ್ಲ–ನಾವು ಕ್ರಿಸ್ತನ ಆತ್ಮದಲ್ಲಿ ನಡೆಯಬೇಕು(ವಚನ 9). ಬೇರೆ ಮಾತುಗಳಲ್ಲಿ ಹೇಳುವುದಾದರೆ, ಕ್ರಿಸ್ತನೇ ನಮ್ಮಲ್ಲಿ ಹೊಸದಾಗಿ "ಹುಟ್ಟುತ್ತಾನೆ''(ವಚನ 13) ಮತ್ತು ನಾವು ಮತ್ತೆ ಜೀವಿಸುತ್ತೇವೆ. ನಾವು ದೇವರ ಆತ್ಮನಿಂದ ನಡೆಸಲ್ಪಡುತ್ತೇವೆ(ವ. 14). ಪವಿತ್ರಾತ್ಮನ ಸೂಚಕ ಕಾರ್ಯಗಳನ್ನು ನಡೆಸುವ ರೂಪದಲ್ಲಲ್ಲ! ಆದರೆ ಕ್ರಿಸ್ತನ ಜ್ಞಾನದಾಯಕ ರೂಪದಲ್ಲಿ. ಈ ಹಾದಿಯಲ್ಲಿ ನಡೆದರೆ, ನಾವು ಬಹಳ ಹಿಂದೆ ಬೇತ್ಲೆಹೇಮಿನಲ್ಲಿ ಜನಿಸಿದ ದೇವಕುಮಾರನ ಮಾದರಿಯಲ್ಲಿ "**ದೇವರ ಮಕ್ಕಳಾ**''ಗುತ್ತೇವೆ.

ಉನ್ನತವಾದ ಆತ್ಮೀಕ ಭಾಷೆಯಲ್ಲಿ ಯೋಹಾನನು, ಯೇಸುಸ್ವಾಮಿಯ ಜನನವನ್ನು "**ನಾವು ಹೊಸದಾಗಿ ಜನಿಸುವುದು**'' ಎಂದು ಕರೆಯುತ್ತಾನೆ. "ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ, ಅವರಿಗೆಲ್ಲಾ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು. ಇವರು ರಕ್ತಸಂಬಂಧದಿಂದಾಗಲೀ, ಕಾಮದಿಂದಾಗಲೀ, ಪುರುಷಸಂಕಲ್ಪದಿಂದಾಗಲಿ ಹುಟ್ಟಿದವರಲ್ಲ; ದೇವರಿಂದಲೇ ಹುಟ್ಟಿದವರು'' (ಯೋಹಾನ 1:12–14).

ಯೇಸುಕ್ರಿಸ್ತನು ತಂದೆಯ ಮಹಿಮೆಯನ್ನು ಪ್ರತಿಫಲಿಸುವ "**ವಾಕ್ಯ**'' ಎಂಬುದರಲ್ಲಿ ಸಂದೇಹವೇ ಇಲ್ಲ. ಆದರೆ ಇಷ್ಟೊಂದು ಎದ್ದುಕಾಣದ ಪಾಠವೊಂದು 12 ಮತ್ತು 13ನೇ ವಚನಗಳಲ್ಲಿವೆ. ಅದೇನೆಂದರೆ ನಾವು ಸಹ ದೀಕ್ಷಾಸ್ನಾನದ ಮೂಲಕ ಹೊಸದಾಗಿ ಹುಟ್ಟಿದರೆ ಅದೇ ವಾಕ್ಯಗಳಾಗಬಹುದು. ಸುವಾರ್ತೆಯನ್ನು ಓದಿ, ಕೇಳಿ, ನಂಬಿಕೆಯಿಂದ ದೇವರ ನಿಯಮಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡರೆ, ನಾವೂ ಸಹ ದೇವರ "**ವಾಕ್ಯ**'' ವಾಗಲು ಸಾಧ್ಯ ಎಂದು ಹೇಳಬಹುದು.

## ಲೋಕದಲ್ಲಿ ಹೊಸದಾಗಿ ಹುಟ್ಟುವುದು

ಇಡೀ ಸೃಷ್ಟಿಯೇ ಹೆರಿಗೆ ಬೇನೆಯಲ್ಲಿರುವಂತೆ, ಪ್ರಸವ ಮಾಡಿಸಲು ಅಳುತ್ತಿರುವ ಹಾಗೆ ಪೌಲನು ಕಲ್ಪಿಸಿಕೊಳ್ಳುತ್ತಾನೆ. ಆತ್ಮೀಕವಾದ ಮಕ್ಕಳು "ಹುಟ್ಟುವ'' ದೇವರ ಉದ್ದೇಶ ನೆರವೇರಬೇಕೆಂಬುದು ಇಡೀ ವಿಶ್ವದ ಹೇಳಿಕೊಳ್ಳಲಾಗದ ತುಡಿತವೇ ಆಗಿದೆ.

"ದೇವಪುತ್ರರ ಮಹಿಮೆಯು ಯಾವಾಗ ಪ್ರತ್ಯಕ್ಷವಾದೀತೆಂದು ಜಗತ್ತು ಬಹು ಲವಲವಿಕೆಯಿಂದ ಎದುರು ನೋಡುತ್ತಿರುವುದು. ಜಗತ್ತು ವ್ಯರ್ಥತ್ವಕ್ಕೆ ಒಳಗಾಯಿತು; ಹೀಗೆ ಒಳಗಾದದ್ದು ಸ್ವೇಚ್ಛೆಯಿಂದಲ್ಲ, ಅದನ್ನು ಒಳಪಡಿಸಿದವನ ಸಂಕಲ್ಪದಿಂದಲೇ. ಆದರೂ





ಅದಕ್ಕೊಂದು ನಿರೀಕ್ಷೆಯುಂಟು; ಏನಂದರೆ, ಈ ಜಗತ್ತು ಕೂಡ ನಾಶದ ವಶದಿಂದ ಬಿಡುಗಡೆಯಾಗಿ ದೇವರು ಮಕ್ಕಳ ಮಹಿಮೆಯುಳ್ಳ ವಿಮೋಚನೆಯಲ್ಲಿ ಪಾಲು ಹೊಂದುವುದೇ. ಜಗತ್ತೆಲ್ಲಾ ಇಂದಿನವರೆಗೂ ನರಳುತ್ತಾ ಪ್ರಸವವೇದನೆ ಪಡುತ್ತಾ ಇರುವುದೆಂದು ನಾವು ಬಲ್ಲೆವು. ಇದು ಮಾತ್ರವಲ್ಲದೆ ಪ್ರಥಮಫಲವಾಗಿರುವ ಪವಿತ್ರಾತ್ಮವರವನ್ನು ಹೊಂದಿದ ನಾವಾದರೋ ದೇವಪುತ್ರರ ಪದವಿಯನ್ನು, ಅಂದರೆ ದೇಹಕ್ಕೆ ಬರಬೇಕಾದ ವಿಮೋಚನೆಯನ್ನು ಎದುರುನೋಡುತ್ತಾ ನಮ್ಮೊಳಗೆ ನರಳುತ್ತೇವೆ'' (ರೋಮಾಪುರದವರಿಗೆ 8:19–23).

"ಈ ಮಕ್ಕಳು ಮುಂಜಾವಿನ ಗರ್ಭದಿಂದ ಹುಟ್ಟುವ ಇಬ್ಬನಿಯಂತೆ ಹುಟ್ಟುತ್ತಾರೆ'' (ಕೀರ್ತನೆಗಳು 110:3). ಈ ಜನರು ಮಣ್ಣಿನಲ್ಲಿ ಪವಡಿಸಿರುತ್ತಾರೆ ಮತ್ತು ಮೃತರಾದ ದೇವಜನರು, ದೇವರು ಭೂಮಿಯ ಮೇಲೆ ಸುರಿಸುವ ಜೋತಿರ್ಮಯ ಇಬ್ಬನಿಯಂತೆ ಎಚ್ಚೆತ್ತು ಹರ್ಷಧ್ವನಿಗೈಯ್ಯುತ್ತಾರೆ.

## ಸರ್ವಕಾರ್ಯಗಳು

"ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ, ಎಂದು ನಮಗೆ ಗೊತ್ತದೆ. ದೇವರು ತನ್ನ ಮಗನಿಗೆ ಅನೇಕಮಂದಿ ಸಹೋದರರಿದ್ದು, ಅವರಲ್ಲಿ ಆತನೇ ಹಿರಿಯನಾಗಿರಬೇಕೆಂದು ಉದ್ದೇಶಿಸಿ ತಾನು ಯಾರನ್ನು ತನ್ನವರೆಂದು ಮೊದಲು ತಿಳುಕೊಂಡನೋ, ಅವರನ್ನು ತನ್ನ ಮಗನ ಸಾರೂಪ್ಯವುಳ್ಳವರಾಗುವುದಕ್ಕೆ ಮೊದಲೇ ನೇಮಿಸಿದನು'' (ರೋಮಾ 8:28–29).

ಶೋಧನೆ ಮತ್ತು ಸಂಕಟಗಳನ್ನೊಳಗೊಂಡು ಸರ್ವಸಂಗತಿಗಳಿಗೂ ತನ್ನ ಮಕ್ಕಳ ಬಗೆಗಿನ ದೇವರ ಒಟ್ಟಾರೆ ಉದ್ದೇಶದಲ್ಲಿ ಸ್ಥಾನವಿದೆ. ತಾನು ಪಟ್ಟ ಬಾಧೆಗಳಿಂದ ಶೋಧಿಸಲ್ಪಟ್ಟು ರೂಪುಗೊಂಡ ತನ್ನ ಚೊಚ್ಚಲ ಮಗನಿಗೆ ಅನುಗುಣವಾಗಿ ದೇವರ ಮಕ್ಕಳ ಆತ್ಮೀಕ ಬೆಳವಣಿಗೆಯೂ ಇರಬೇಕೆಂಬುದು ದೇವರ ಉದ್ದೇಶ(ಇಬ್ರಿಯ 5:7–9). ಕ್ರಿಸ್ತನನ್ನು ತಿಳಿಕೊಂಡು ಅವನ ಹೆಜ್ಜೆಯ ಜಾಡಿನಲ್ಲಿ ನಡೆದರೆ ನಾವು ಪಾಪದ ಪಾಲಿಗೆ "ಸತ್ತು'' ಆತನ ನೀತಿವಂತಿಕೆಯಲ್ಲಿ "**ಜೀವಿಸುವವರಾಗಿರುತ್ತೇವೆ**'' (1ಪೇತ್ರ 2:19–25).

‘‘ಹಾಗಾದರೆ ನಾವು ಈ ವಿಷಯದಲ್ಲಿ ಏನು ಹೇಳೋಣ? ದೇವರು ನಮ್ಮ ಕಡೆ ಇದ್ದರೆ, ನಮ್ಮನ್ನು ಎದುರಿಸುವವರು ಯಾರು? ಸ್ವಂತ ಮಗನನ್ನೇ ಉಳಿಸಿಕೊಳ್ಳದೆ ಆತನನ್ನು ನಮಗೋಸ್ಕರ ಒಪ್ಪಿಸಿಕೊಟ್ಟನಲ್ಲಾ; ಮಗನನ್ನು ಕೊಟ್ಟಮೇಲೆ ಸಮಸ್ತವನ್ನು ನಮಗಾಗಿ ದಯಪಾಲಿಸದೆ ಇರುವನೇ?......... ಕ್ರಿಸ್ತನ ಪ್ರೀತಿಯಿಂದ ನಮ್ಮನ್ನು ಅಗಲಿಸುವವರು ಯಾರು?’’ (ರೋಮಾ 8:31–35).

## ಹೊಸದಾಗಿ ಹುಟ್ಟಿದ ನಂತರದ ಜೀವನ

‘‘ನೀವು ಸತ್ಯೋಪದೇಶಕ್ಕೆ ವಿಧೇಯರಾಗಿದ್ದು ನಿಮ್ಮ ಆತ್ಮಗಳನ್ನು ಶುದ್ಧಮಾಡಿಕೊಂಡದ್ದರಿಂದ ನಿಷ್ಕಪಟವಾದ ಸಹೋದರ ಸ್ನೇಹವುಳ್ಳವರಾಗಿರತಕ್ಕದ್ದು. ಹೀಗಿರಲಾಗಿ ಒಬ್ಬರೊನ್ನಬ್ಬರು ಹೃದಯಪೂರ್ವಕವಾಗಿಯೂ, ಯತಾರ್ಥವಾಗಿಯೂ ಪ್ರೀತಿಸಿರಿ. ನೀವು ಪುನರ್ಜನ್ಮ ಹೊಂದಿದವರಾಗಿರುತ್ತೀರಲ್ಲಾ; ಈ ಜನ್ಮವು ನಾಶವಾಗುವ ಬೀಜದಿಂದ ಉಂಟಾದದಲ್ಲ, ನಾಶವಾಗದ ಬೀಜದಿಂದಲೇ ಉಂಟಾದದ್ದು. ಅದು ದೇವರ ಸದಾ ಜೀವವುಳ್ಳ **ವಾಕ್ಯ**ದ ಮೂಲಕ ಉಂಟಾಯಿತು’’ (1ಪೇತ್ರ 1:22–23).

ಕ್ರಿಸ್ತನು ದೇವರ ಪವಿತ್ರಶಕ್ತಿಯಿಂದ ಹುಟ್ಟಿದವನಾಗಿದ್ದನು, ಅಂತೆಯೇ ನಾವು ಸಹ ‘‘ದೇವರ ಮಕ್ಕಳಾ’’ಗುವುದು ದೇವರ ಪವಿತ್ರ ವಾಕ್ಯವು ನಮ್ಮ ಮನಸ್ಸುಗಳನ್ನು ಪ್ರಭಾವಿತಗೊಳಿಸಿದಾಗ. ನಮ್ಮ ಮನಸ್ಸುಗಳಲ್ಲಿ ನಾಟಿದ ನಾಶವಾಗದ ಬೀಜವು ನೈಸರ್ಗಿಕವಾದ ಒಣಗಿಹೋಗುವ ಹುಲ್ಲಿನಂತೆಯೂ, ಉದುರಿಹೋಗುವ ಹೂವಿನಂತೆಯೂ ಆಗದೆ, ಮೂಲಭೂತವಾಗಿಯೇ ಭಿನ್ನವಾದ ‘‘**ಗಿಡ**’’ದಂತಿರುತ್ತದೆ(ವ. 24). ಏಕಂದರೆ ಅದಕ್ಕೆ ಸರ್ವಕಾಲಕ್ಕೂ ತಾಳಿ ಉಳಿಯುವ ಸಾಮರ್ಥ್ಯವಿರುತ್ತದೆ(ವ. 25). ವಿಶ್ವಾಸಿಗಳಿಗೆ ಈಗ ನಿತ್ಯಜೀವ ಸಿಕ್ಕುವುದು ಈ ಒಂದು ಅರ್ಥದಲ್ಲಿ ಮಾತ್ರ(1ಯೋಹಾನ 5:12–13).



ಆದ್ದರಿಂದ ಪೇತ್ರನು ಮುಂದುವರೆದು, ಕ್ರಿಸ್ತನು ಆರಂಭದಲ್ಲಿ ಒಂದು ಮಗುವಾಗಿಯೇ ಆದರೂ, ಬೇತ್ಲೆಹೇಮಿನಲ್ಲಿ ಹುಟ್ಟಿದ ಮಗುವಿನಂತೆ ನೀವೂ ನವಜಾತ ಶಿಶುಗಳೇ; ಅವರಂತೆ ಪಾರಮಾರ್ಥಿಕವಾದ ಶುದ್ಧ ಹಾಲನ್ನೇ ಬಯಸಿರಿ(1ಪೇತ್ರ 2:2) ಎನ್ನುತ್ತಾನೆ. ಹಿಂದೆ ಯೇಸುಕ್ರಿಸ್ತ ಮಾಡಿದಂತೆ, ನಾವು ಆತನ ಕೃಪಾಪೂರ್ಣ ಆರೈಕೆಯಲ್ಲಿ ವಿಶ್ರಮಿಸುತ್ತಾ, ಪೂರ್ಣವಿಶ್ವಾಸದಿಂದ, ಲೌಕಿಕ



ವಸ್ತುಗಳನ್ನು ಅರಸದೆ ಸಮಯಕಾಯಬೇಕು. ಕ್ರಮೇಣ ಯೇಸುವಿನಲ್ಲಿಯೇ ಬೆಳೆಯುತ್ತಾ ಪೂರ್ಣ ಪ್ರೌಢತ್ವವನ್ನು ತಲುಪಬೇಕು.

ಕ್ರಿಸ್ತನು ಮೊದಲಿಗೆ ಕಾಣಿಸಿಕೊಳ್ಳುವುದು ಗೋದಲಿಯಲ್ಲಿನ ಒಂದು ಮಗುವಿನಂತೆ. ನಾವು ಅಷ್ಟೆ, ಮಹಿಮಾವಂತ ಸುವಾರ್ತೆಯಿಂದ ಮೊದಲಿಗೆ ಕರೆಯಲ್ಪಟ್ಟಾಗ, ಆಗ ತಾನೆ ಹುಟ್ಟಿದ ಮಗುವಿನಂತಿರುತ್ತೇವೆ, ಮತ್ತು ಮಗುವಿನ ಹಾಗೆಯೇ ಭವಿಷ್ಯದಲ್ಲಿ ಯೌವ್ವನ ಮತ್ತು ಶಕ್ತಿಗಳ ಅರಳುವಿಕೆಯಲ್ಲಿ ಕೊನೆಯದಾಗಿ ಬರಲಿರುವ ಗರಿಷ್ಠ ಪ್ರಮಾಣದ ಪುರುಷತ್ವದಲ್ಲಿ, ಅದ್ಭುತ ನಿರೀಕ್ಷೆಯುಳ್ಳವರಾಗಿರುತ್ತೇವೆ.

‘‘ನಾವೆಲ್ಲರೂ ದೇವಕುಮಾರನ ವಿಷಯವಾದ ಜ್ಞಾನದಿಂದ...... ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಯಾಣವನ್ನು ಮುಟ್ಟುವ ತನಕ’’ (ಎಫೆಸ 4:13), ನಮ್ಮ ವಿಶ್ವಾಸವೂ, ಚಾರಿತ್ರ್ಯವೂ ಬೆಳೆಯಬೇಕು ಮತ್ತು ಬೆಳೆಯುತ್ತದೆ.

ಇದು ಸಾಧ್ಯ! ನಾವಿನ್ನೂ ಆರಂಭದ ಪರಿವೀಕ್ಷಣೆಯ ಹಂತದಲ್ಲಿರುವಾಗ ದೂರದಿಂದ ಕ್ರಿಸ್ತನನ್ನು ಅವನ ಎಲ್ಲಾ ಪರಿಪೂರ್ಣನೆಯಲ್ಲಿ ಕಾಣುವಾಗ ಇದು ಅಸಾಧ್ಯವೆಂದೇ ತೋರಬಹುದು. ಆದರೆ ದೂರಾವಧಿ ಓಟ ಪಂದ್ಯವೂ ಸಹ ಒಂದೊಂದೇ ಹೆಜ್ಜೆಯ ಒಟ್ಟು ಮೊತ್ತವೇ ಆಗಿದೆ. ಮತ್ತು ದೇವರು ಈ ಪಂದ್ಯವನ್ನು ಓಡಿ ಗೆಲ್ಲಲು ಅಗತ್ಯವಾದ ಶಕ್ತಿಯನ್ನು ನಮಗೆ ಕೊಡುವುದಾಗಿ ಹೇಳಿದ್ದಾನೆ! ದೇವರು ನಮಗಿತ್ತಿರುವ ಆಜ್ಞೆಯೇನೆಂದರೆ ನಾವು ಆತನ ಮಗನನ್ನು ಹಿಂಬಾಲಿಸಿ ಆತನಂತೆ ಒಂದೊಂದೇ ಹೆಜ್ಜೆಯಿಟ್ಟು ಬೆಳೆಯುತ್ತಾ, ಶೋಧನೆಗಳ ಮೂಲಕ ವಿಧೇಯತೆಯನ್ನು ಕಲಿಯಬೇಕು ಎಂಬುದೇ. ಮತ್ತು ವಿಧೇಯರಾಗಿರುವವರಿಗೆ , ಅವರು ಜ್ಞಾನಿಗಳಾಗಿರಲಿ ಅಥವಾ ಇಲ್ಲದಿರಲಿ ತನ್ನ ಮಗನೊಂದಿಗೆ ಜೊತೆಯಾಗಿ ಅವರು ಪಡುವ ಶ್ರಮ, ಸಂಕಟ ಮತ್ತು ಬಾಧೆ ಎಲ್ಲದರ ನಡುವೆ ದೇವರು ತನ್ನನ್ನೇ ಅವರಿಗೆ ಪ್ರಕಟ ಪಡಿಸುತ್ತಾನೆ. ಹೆಚ್ಚುಹೆಚ್ಚಾಗಿ, ಹೆಜ್ಜೆಹೆಜ್ಜೆಯಾಗಿ ಕ್ರಿಸ್ತನು ನಿಜವಾಗಿ ಯಾರು ಎಂಬುದನ್ನು ಕಲಿತು ಅವನೊಂದಿಗೆ ಸಾರೂಪ್ಯವನ್ನು ಹೊಂದುತ್ತಾರೆ.

## ದೇವರ ಮಕ್ಕಳು

ವಾಸ್ತವವಾಗಿ ನಾವೆಲ್ಲರೂ ದೇವರ ಮಕ್ಕಳೇ ಅಲ್ಲವೇ? ಆತನ ಪ್ರೇಮದಲ್ಲಿ ಜನಿಸಿ, ಪರಸ್ಪರ ಸಹೋದರ ಪ್ರೇಮದಲ್ಲಿ ನಮ್ಮ ‘‘**ಕುಮಾರತ್ವ**’’ವನ್ನು ಅಸ್ಥಿತ್ವಕ್ಕೆ ತರುತ್ತೇವೆ. ದೇವರು ನಮ್ಮನ್ನು ಮೊದಲು ಪ್ರೀತಿಸಿದ್ದರಿಂದ ನಾವು ಆತನನ್ನು ಪ್ರೀತಿಸುತ್ತೇವೆ. ಏಕಂದರೆ ‘‘ಕುಮಾರತ್ವ’’ವು ನಾವು ಏನು ಮಾಡಿದ್ದೇವೆ ಎನ್ನುವುದರ ಮೇಲಲ್ಲ, ಏನನ್ನು ಪಡೆದಿದ್ದೇವೆ ಎನ್ನುವುದರ ಮೇಲೆ ಮತ್ತು ಏನನ್ನು ಸಂಪಾದಿಸಿದ್ದೇವೆ ಎನ್ನುವುದರ ಮೇಲಲ್ಲ, ಏನನ್ನು ಕಾಣಿಕೆಯಾಗಿ ಸ್ವೀಕರಿಸಿದ್ದೇವೆ ಎನ್ನುವುದರ ಮೇಲೆ ನಿರ್ಧಾರಿತವಾಗುತ್ತದೆ.

‘‘ಪ್ರೇಮದ ಈ ವಿಸ್ಮಯಕಾರೀ ಕಾಣಿಯನ್ನು ನೋಡಿ;
ತಂದೆಯಾದ ದೇವರು ನಮಗೆ ಪ್ರಸಾದಿಸಿರುತ್ತಾನೆ,
ನಮಗೆ ಪಾಪಿಗಳಾದ ಮನುಷ್ಯ ಸಂತಾನಕ್ಕೆ ನಮ್ಮನ್ನೇ
ದೇವಪುತ್ರರೆಂದು ಕರೆಸಿಕೊಳ್ಳುವ ಸಲುವಾಗಿ’’.

● ● ● ● ● ● ● ● ● ● ● ●

# ದೇವರ ವಾಗ್ದಾನಗಳಿಗೆ ಆಧಾರ
## (ಸುವಾರ್ತಾ ಸಂದೇಶದ ಬೆಳವಣಿಗೆ)

ಮೊದಲನೆಯ ಶತಮಾನದಲ್ಲಿ ಯೇಸುಕ್ರಿಸ್ತನ ಅನುಯಾಯಿಗಳು ಕೆಲವು ಅಸಾಧಾರಣ ಸಮರ್ಥನೆಗಳನ್ನು ಮಾಡತೊಡಗಿದಾಗ ಅಂದಿನ ಜನರು ಯಾವುದು ಸತ್ಯ, ಯಾವುದು ಅಲ್ಲ ಎನ್ನುವುದನ್ನು ಅರಿತುಕೊಳ್ಳುವುದು ಹೇಗೆ ಸಾಧ್ಯವಾಯಿತು? ತಮ್ಮ ರಕ್ಷಕನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು ಮತ್ತು ಯೆಹೂದ್ಯರು, ರೋಮನ್ ಅಧಿಕಾರಿಗಳೂ ದೊಡ್ಡ ಅನ್ಯಾಯವೊಂದಕ್ಕೆ ಕಾರಣಕರ್ತರು ಎಂದು ಹೇಳುವುದರ ಜೊತೆಗೆ ಈ ಅನುಯಾಯಿಗಳು ದೇವರ ಈ ಮಹಾ ರಕ್ಷಣ ಕಾರ್ಯವನ್ನು ಜನರ ಗಮನಕ್ಕೆ ತಂದುಕೊಂಡು ಅದರ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕು ಎಂದೂ ಹೇಳುತ್ತಿದ್ದರು. ಲೇಖಕ ***ಜಾನ್ ಹೆಲವೆಲ್*** ಅವರು ಈ ಲೇಖನದಲ್ಲಿ ಪುನರುತ್ಥಾನ ಹೊಂದಿ ಎಬ್ಬಿಸಲ್ಪಟ್ಟ ಕ್ರಿಸ್ತನ ವಿಷಯದಲ್ಲಿ ಸಾಕ್ಷಿ ಹೇಳುತ್ತಿದ್ದ ಅಪೋಸ್ತಲರ ಮಾತುಗಳ ಮತ್ತು ಕಾರ್ಯಗಳ ಪ್ರಭಾವವನ್ನು ಗುರುತಿಸುವ ಪ್ರಯತ್ನವನ್ನು ಮಾಡಿದ್ದಾರೆ.

## ಸ್ವಸ್ಥನಾದ ಕುಂಟ ಮನುಷ್ಯ :–

ಪ್ರಾರ್ಥನೆಯ ವೇಳೆಯಲ್ಲಿ–ಅಂದರೆ ಒಂಬತ್ತನೆಯ ತಾಸು ಅಥವಾ ನಮ್ಮ ಲೆಕ್ಕದಲ್ಲಿ ಮಧ್ಯಾಹ್ನ 3 ಘಂಟೆ, ಪೇತ್ರ ಮತ್ತು ಯೋಹಾನರು ದೇವಾಲಯದತ್ತ ಹೊರಟಿದ್ದರು. ದೇವಾಲಯದ ಪ್ರಾಕಾರವನ್ನು ಪ್ರವೇಶಿಸಲು ಇದ್ದ ಅನೇಕ ಮಹಾದ್ವಾರಗಳಲ್ಲಿ ಒಂದಾದ ಸುಂದರದ್ವಾರ(ಏಕೆಂದರೆ ಆ ದ್ವಾರವು ಕೊರಿಂಥದಿಂದ ಅಮದಾದ ಬೆಲೆಯುಳ್ಳ ಕಂಚಿನ ಕೆತ್ತನೆಯಿಂದ ಅಲಂಕೃತವಾಗಿತ್ತು) ಎಂದು ಕರೆಯಲ್ಪಡುವ ದ್ವಾರವನ್ನು ಅವರು ಸಮೀಪಿಸಿದಾಗ, ಅಷ್ಟೇನು ಸುಂದರವಲ್ಲದ





ನೋಟವೊಂದು ಅವರಿಗೆ ಎದುರಾಯಿತು. ಅವರ ಕಾಲಬುಡದಲ್ಲಿಯೇ ಕುಂಟನೊಬ್ಬ ಬಿದ್ದುಕೊಂಡಿದ್ದ.

ಅವನು ನಲವತ್ತರ ಪ್ರಾಯವನ್ನು ದಾಟಿದ್ದ(ಅಪೋಸ್ತಲರ ಕೃತ್ಯಗಳು 4:22 ನೋಡಿ), ಹುಟ್ಟು ಕುಂಟನಾಗಿದ್ದ. ಅನೇಕ ವರ್ಷಗಳಿಂದ ಪ್ರತಿನಿತ್ಯವೂ ಅವನನ್ನು ಆ ಸ್ಥಳಕ್ಕೆ ಬಿಕ್ಷೆ ಬೇಡಲು ಹೊತ್ತು ತರಲಾಗುತ್ತಿತ್ತು. ಇಬ್ಬರು ಅಪೋಸ್ತಲರೂ ಅವನ ಮುಂದೆ ಕ್ಷಣಕಾಲ ತಡೆದಿರಬಹುದು, ''**ನಮ್ಮನ್ನು ನೋಡು**'' ಎಂದು ಅವರೆಂದಾಗ ಆ ವಿಕಲಾಂಗನಾದ ಬಿಕ್ಷುಕ ಅವರಿಂದ ಧನಸಹಾಯವನ್ನು ನಿರೀಕ್ಷಿಸಿರಬಹುದು. ಅವನದ್ದು ದ್ರವ್ಯಾಶೆಯೇ ಆಗಿದ್ದರೆ, ಅದು ತಕ್ಷಣ ಹುಸಿಯಾಗುತ್ತದೆ; ಏಕಂದರೆ ಪೇತ್ರ ಆರಂಭಿಸಿದ್ದು ಹೀಗೆ–''ಬೆಳ್ಳಿ ಬಂಗಾರವಂತೂ ನನ್ನಲ್ಲಿಲ್ಲ ಆದರೆ.......''. ಆದರೆ ಮುಂದುವರೆದು ತನ್ನಲ್ಲಿರುವುದನ್ನು(ನಿಜಕ್ಕೂ ಅದಕ್ಕಿಂತ ಮಿಗಿಲಾದದ್ದು) ಕೊಡುತ್ತೇನೆ ಎನ್ನುತ್ತಾನೆ–

''ನನ್ನಲ್ಲಿರುವುದನ್ನು ನಿನಗೆ ಕೊಡುತ್ತೇನೆ, ನಜರೇತಿನ **ಯೇಸು**ವಿನ ಹೆಸರಿನಲ್ಲೇ ಎದ್ದು ನೆಡೆದಾಡು'' (ಅ.ಕೃ. 3:6).

ಪೇತ್ರನು ಕೈಚಾಚಿ ಅವನ ಬಲಗೈಯನ್ನು ಹಿಡಿದು ಎತ್ತಿ ಅವನ ಕಾಲುಗಳ ಮೇಲೆ ನಿಲ್ಲಿಸಿದನು. ಆ ಕ್ಷಣವೇ ಅವನ ಕಾಲುಗಳಲ್ಲಿ ಬದಲಾವಣೆಯಾಗಿ ಅವುಗಳಿಗೆ ಬಲಬಂದಿತು. ಅದುವರೆಗೂ ನಿಲ್ಲಲೂ, ನಡೆಯಲೂ ಆಗಿರದ ಆ ಮನುಷ್ಯ ಗಾಳಿಯಲ್ಲಿ ಹಾರಿ ಕುಪ್ಪಳಿಸುತ್ತಾ ನೆಡೆದಾಡಿದ!

ಇದೊಂದು ಗಮನಿಸಬೇಕಾದ ಸೂಚಕಕಾರ್ಯ(ಅ.ಕೃ. 4:16) ಒಂದು ಮಗುವು ಕೂಡ ಸಾಮಾನ್ಯ ಬೆಳವಣಿಗೆಗೆ ಅನುಸಾರವಾಗಿ ಮೊದಲು ನಿಲ್ಲಲು ಕಲಿಯುತ್ತದೆ. ಕ್ರಮೇಣ ತಪ್ಪು ಹೆಜ್ಜೆಗಳನ್ನಿಟ್ಟು ನೆಡೆಯುತ್ತಾ, ಕೊನೆಯದಾಗಿ ಹಾರಿಕುಣಿದು, ಬೀಳದೆ ನಿಲ್ಲುವ ಕಲೆಯನ್ನು ರೂಢಿಸಿಕೊಳ್ಳುತ್ತದೆ. ಈ ಕುಂಟನ ವಿಷಯದಲ್ಲಿ ಈ ಹಂತಗಳಲ್ಲಾ ಕ್ಷಣಮಾತ್ರದಲ್ಲಿ ನಡೆದವು; ಕ್ಷೀಣವಾದ ಮಾಂಸಖಂಡಗಳು ಬಲಗೊಂಡವು, ಮತ್ತೆಲ್ಲಾ ಜಟಿಲವಾದ ಶಾರೀರಿಕ ಸಮತೋಲನ ಮತ್ತು ಸಮನ್ವಯಗೊಳಿಸುವ ಕ್ರಿಯೆಗಳೆಲ್ಲಾ ಏಕಕಾಲದಲ್ಲಿ ನಡೆದವು.

## ಪರಮೋತ್ಸಾಹ :–

ಕುಂಟನಾಗಿದ್ದ ಆ ಮನುಷ್ಯನ ಸಂತೋಷವು ಎಲ್ಲೆ ಮೀರಿ ದೇವರ ಸ್ತೋತ್ರದಲ್ಲಿ ಉಕ್ಕಿ ಹರಿಯಿತು. ಅವನ ಕಾರ್ಯಗಳೂ, ಗದ್ದಲವೂ ಸುತ್ತಲಿನ ಜನರ ಗಮನವನ್ನು ಸೆಳೆದವು. ಅವರು ಅವನನ್ನು ಸುಂದರ ದ್ವಾರದ ಬಳಿ ಕುಳಿತು ಬಿಕ್ಷೆಬೇಡುತ್ತಿದ್ದ ಕುಂಟನೆಂದು ಗುರುತಿಸಿದರು:

''....ಅವನಿಗೆ ಸಂಭವಿಸಿದ್ದಕ್ಕೆ ವಿಸ್ಮಯ ಹಿಡಿದವರಾಗಿ ಬಹಳ ಬೆರಗಾದರು''(3:10).

ನೋಡುತ್ತಿದ್ದಂತೆ ಸೊಲೊಮೋನನದೆಂಬ ಮಂಟಪದಲ್ಲಿದ್ದ ಈ ಮೂವರ ಸುತ್ತಲೂ ಜನರ ದೊಡ್ಡ ಗುಂಪು ಕೂಡಿತು. ಆ ಮನುಷ್ಯನು ಪೇತ್ರ ಯೋಹಾನರನ್ನು ಹಿಡಿದುಕೊಂಡೇ ಇದ್ದನು, ಮತ್ತು ನೆರೆದವರಲ್ಲಿ ಪಂಚಾಶತ್ತಮ ದಿನದಂದು ಪೇತ್ರ ಮಾಡಿದ ಸೂಚಕ ಕಾರ್ಯಾನ್ನು ನೋಡಿದ ಕೆಲವರಾದರೂ ಇದ್ದು ಅಂಥವರು ಇದು ಅಪೋಸ್ತಲರು ಮಾಡಿದ ಮತ್ತೊಂದು ಸೂಚಕಕಾರ್ಯವೆಂದು ಗುರುತಿಸಿರಲಿಕ್ಕೂ ಸಾಕು. ಪೇತ್ರನು ಈ ಸಂದರ್ಭದಲ್ಲಿ ದೊಡ್ಡದಾಗುತ್ತಾ

ಹೋಗುತ್ತಿದ್ದ ಗುಂಪನ್ನು ಕುರಿತು ಅವರು ಆಶ್ಚರ್ಯಪಡುವುದೇಕೆ ಮತ್ತು ಪೇತ್ರ, ಯೋಹಾನರು ತಮ್ಮ ಸ್ವಂತಶಕ್ತಿಯಿಂದ ಮತ್ತು ದೇವಭಕ್ತಿಯಿಂದ ಇದನ್ನು ಮಾಡಿದರೆಂದು ಭಾವಿಸುವುದೇಕೆ ಎಂದು ಕೇಳಿದನು. ಪೇತ್ರನ ಮಾತಿನ ಅರ್ಥವೇನೆಂದರೆ, ತಾನಾಗಲೀ, ಯೋಹಾನನಾಗಲಿ ಈ ಸೂಚಕಕಾರ್ಯಕ್ಕೆ ನೇರ ಕಾರಣರಲ್ಲ ಮತ್ತು ಜನರಿಗೆ ಇದು ನಡೆದದ್ದು ಹೇಗೆ ಎಂದು ಗೊತ್ತಾದರೆ, ಅವರು ಇದರ ಮಹತ್ವವನ್ನು ಅರಿತಾರು ಎಂದು ತಿಳಿಸುವುದೇ ಆಗಿತ್ತು.

## ಸೂಚಕಕಾರ್ಯದ ಶ್ರೇಯಸ್ಸು ಕ್ರಿಸ್ತನಿಗೇ ಸಲ್ಲಬೇಕು :–

ಮೂಲಪಿತೃಗಳಾದ ಅಬ್ರಹಾಮ, ಇಸಾಕ ಮತ್ತು ಯಾಕೋಬರ ದೇವರು ಮಹಿಮಾನ್ವಿತ ಸೇವಕ ಯೇಸುವಿನ ಮೂಲಕ ಈ ಸೂಚಕಕಾರ್ಯವನ್ನು ನೆಡೆಸಿದ್ದಾನೆ ಎಂದು ಪೇತ್ರನು ವಿವರಿಸಲು ಆರಂಭಿಸಿದನು. ಕೆಲವೇ ತಿಂಗಳುಗಳ ಹಿಂದೆ ನಡೆದ ಘಟನಾವಳಿಯಲ್ಲಿ ಈ ಜನರ ಪಾತ್ರವನ್ನು ಅವರಿಗೆ ನೆನಪಿಸಿದನು. ಈ ಜನರು ರೋಮನ್ ಅಧಿಕಾರಿಯಾದ ಪಿಲಾತನ ಮುಂದೆ ಯೇಸುವನ್ನು ವಿಚಾರಣೆಗೆ ಒಪ್ಪಿಸಿದ್ದರು. ಆತನನ್ನು ತಿರಸ್ಕರಿಸಿ ಪಿಲಾತನು ಆತನನ್ನು ಬಿಡಿಸಲು ಮಾಡಿದ ಎಲ್ಲಾ ಪ್ರಯತ್ನಗಳನ್ನು ವಿರೋಧಿಸಿದ್ದರು. ಮೂರು ಬಾರಿ ಈ ಅಧಿಕಾರಿಯು ಯೇಸುವನ್ನು ನಿರ್ದೋಷಿಯೆಂದು ಘೋಷಿಸಿದ್ದನು(ಯೋಹಾನ 18:38, 19:4,6) ಕೊನೆಗೆ ಸಾಂಕೇತಿಕವಾಗಿ ತನ್ನ ಕೈಗಳನ್ನು ತೊಳೆದುಕೊಂಡು ಸುಮ್ಮನಾಗಿದ್ದನು. ಪರಿಶುದ್ಧನೂ, ನೀತಿವಂತನೂ ಆದ ಯೇಸುಕ್ರಿಸ್ತನಿಗೆ ಮರಣದಂಡನೆ ವಿಧಿಸಲು ಅವರೇ(ಯೆಹೂದ್ಯರೇ) ಪೂರ್ತಿಯಾಗಿ ಕಾರಣರು ಎಂದು ಪೇತ್ರನು ವಿವರಿಸಿದನು. ಕೊಲೆಗಾರನೆಂದು ಸಾಬೀತಾದ ಬರಬ್ಬನನ್ನು(ಲೂಕ 23:18, 19, 25) ಬಿಡುಗಡೆಗೊಳಿಸಿ, ಆತನ ಬದಲಿಗೆ ಜೀವದಾಯಕನನ್ನು ಮರಣಕ್ಕೆ ಗುರಿಮಾಡಬೇಕೆಂದು ಅವರು ಕೇಳಿದ್ದರು. ಆದರೂ ದೇವರು ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದನು. ಮತ್ತು ಇದಕ್ಕೆ ಸ್ವತಃ ಪೇತ್ರ ಯೋಹಾನರೇ ಸಾಕ್ಷಿಗಳಾಗಿದ್ದರು. ಈಗತಾನೇ ಅವರು ನೋಡಿದ ಸೂಚಕಕಾರ್ಯ– ಹುಟ್ಟು ಕುಂಟನು ಒಮ್ಮೆಲೇ ನೆಟ್ಟಗಾದದ್ದು ತಮ್ಮ ಮಾತಿಗೆ ಪುಷ್ಟಿ ಕೊಡುವಂತದ್ದಾಗಿದೆ. ಇದು ಯೇಸುವಿನ ಹೆಸರಿನಲ್ಲಿ ಇಟ್ಟ ನಂಬಿಕೆಯ ಪರಿಣಾಮವಾಗಿದೆ.

## ದೇವರ ಯೋಜನೆ ನೆರವೇರಿತು :–

ಯೇಸುಕ್ರಿಸ್ತನ ಮರಣದಲ್ಲಿ ಈ ಜನರು ಶಾಮೀಲಾಗಿದ್ದದ್ದು ಪ್ರತ್ಯಕ್ಷವಾಗಿದ್ದರೂ, ತನ್ನ ಮಾತುಗಳಿಂದ ಅವರಿಗೆ ಉಂಟಾಗಿರಬಹುದಾದಂಥ ಆಘಾತವನ್ನು ಕಡಿಮೆಗೊಳಿಸಲು ಪೇತ್ರನು ಅದರ ನಿಜವಾದ ಮಹತ್ವದ ಬಗೆಗಿನ ಅಜ್ಞಾನವೂ ಅವರು(ಅ.ಕೃ. 2:37 ಹೋಲಿಸಿ) ಮಾಡಿದ ಕಾರ್ಯಕ್ಕೆ ಕಾರಣ ಎಂದು ವಿವರಿಸಿದನು.

ಪೂರ್ವಕಲ್ಪಿತ ವಿಚಾರಗಳಿಂದ ಮತ್ತು ಪೂರ್ವಾಗ್ರಹದಿಂದ ಕುರುಡರಾದ ಅವರ ಅಧಿಕಾರಿಗಳು ಯೇಸುಕ್ರಿಸ್ತನೇ ಬರಲಿದ್ದ ಮೆಸ್ಸೀಯ ಎಂದು ಗುರುತಿಸುವಲ್ಲಿ ವಿಫಲರಾಗಿದ್ದರು. ಮರಣದಂಡನೆಯನ್ನೇ ವಿಧಸಬೇಕೆಂದು ಕೇಳಲು ಜನಜಂಗುಳಿಯನ್ನು ಪ್ರಚೋದಿಸಿದವರು ಅವರೇ.



ಆದರೂ ವಿಶೇಷವೇನೆಂದರೆ ಈ ಮೂಲಕ ಅವರು ಹಳೇಒಡಂಬಡಿಕೆಯ ಪ್ರವಾದನೆಗಳಿಗೆ ಅನುಸಾರವಾಗಿ ದೇವರ ಯೋಜನೆಯ ಉದ್ದೇಶವನ್ನೇ ನೆರವೇರಿಸಿದ್ದರು! ಹೀಗೆ ಪೇತ್ರನು ಈ ಘಟನೆಗಳು ಪ್ರವಾದಿಗಳ ಬಾಯಿಂದ ಮುಂತಿಳಿಸಲ್ಪಟ್ಟಿದ್ದವು ಎಂದು ಕುತೂಹಲಕರವಾಗಿ ಹೇಳುತ್ತಾನೆ. ಹೀಗೆ ಕ್ರಿಸ್ತನನ್ನು ಹೊಸಒಡಂಬಡಿಕೆಯಲ್ಲಿ ಮಾತ್ರವಲ್ಲ, ಇಡೀ ಸತ್ಯವೇದದಲ್ಲಿ ಕಾಣಬಹುದು ಎಂಬ ಸತ್ಯವೇದದ ವಿದ್ಯಾರ್ಥಿಗಳ ನಂಬಿಕೆಯನ್ನು ಪೇತ್ರನು ಸಮರ್ಥಿಸುತ್ತಾನೆ. ಹಳೇ ಒಡಂಬಡಿಕೆಯ ಪ್ರವಾದನೆಗಳು ಹೇಗೆ ತನ್ನನ್ನೇ ಕುರಿತದ್ದಾಗಿವೆ ಎಂದು ಯೇಸುಕ್ರಿಸ್ತನು ವಿವರಿಸಿದ್ದನ್ನು ಇತರ ಅಪೋಸ್ತಲರ ಜೊತೆ ಪೇತ್ರ ಮತ್ತು ಯೋಹಾನರೂ ಕೇಳಿದ್ದರು(ಲೂಕ 24:44–48).

ಅದೆಂಥ ಅದ್ಭುತ ಅನುಭವವಾಗಿದ್ದಿರಬಹುದು! ಮೇಲ್ನೋಟಕ್ಕೆ ಎಲ್ಲವೂ ನಷ್ಟವಾದಂತೆ ಕಂಡರೂ, ನಿಜಕ್ಕೂ ಹಾಗಾಗಿಲ್ಲ ಎಂದು ಪೇತ್ರನು ವಿವರಿಸಿದನು. ಪಶ್ಚಾತ್ತಾಪ ಪಟ್ಟರೆ ದೇವರು ತಮ್ಮ ಮಗನ ಕೊಲೆಗಡುಕರನ್ನು ಕ್ಷಮಿಸುತ್ತಾನೆ(ಅ.ಕೃ. 3:38 ಹೋಲಿಸಿ) “**ಪಶ್ಚಾತ್ತಾಪ**” ಎಂದರೆ ಬರೀ ನಮ್ಮ ಗತಬದುಕಿನ ಬಗ್ಗೆ ಮರುಗುವುದಲ್ಲ. ಆದರೆ ಪೇತ್ರ ಹೇಳಿದಂತೆ ತಿರುಗಿಕೊಳ್ಳುವುದು, ನಾವು ಪಾಪಕ್ಕೆ ವಿಮುಖರಾಗಿ ಯೇಸುವನ್ನು ಹಿಂಬಾಲಿಸಲು, ನಮ್ಮ ಬದುಕನ್ನು ಬೇರೆಯೇ ಆದ ಇನ್ನೊಂದು ದಿಕ್ಕಿಗೆ ನಿರ್ದೇಶಿಸಬೇಕಾಗುತ್ತದೆ. ತಮ್ಮ ಅಭಿಮತದಲ್ಲಿ ಮಾಡಿಕೊಂಡ ಬದಲಾವಣೆಯು ಅವರ ಹಿಂದಿನ ಪಾಪಗಳಿಗೆ ಕ್ಷಮಾಪಣೆಯನ್ನು ದೊರಕಿಸುತ್ತದೆ ಎಂದು ಪೇತ್ರನು ತನ್ನ ಮಾತುಗಳನ್ನು ಆಲಿಸುತ್ತಿದ್ದವರಿಗೆ ವಿವರಿಸಿದನು. ಈ ಮಾತುಗಳು ನಮ್ಮಲ್ಲಿ ಪ್ರತಿಯೊಬ್ಬರಿಗೂ ಅನ್ವಯಿಸುತ್ತದೆ. ನಿಜವಾದ ಕ್ರೈಸ್ತನ ಪ್ರಮಾಣಗಳೆಂದರೆ–ಪಶ್ಚಾತ್ತಾಪ, ವಿಶ್ವಾಸ ಮತ್ತು ಯೇಸುವಿನ ರಕ್ಷಣಾದಾಯಕ ಹೆಸರಿನಲ್ಲಿ ದೀಕ್ಷಾಸ್ನಾನ ಹೊಂದುವುದೇ ಆಗಿವೆ.

ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ಪಡೆಯುವ ಬಗ್ಗೆ ಇಲ್ಲಿ ನಿರ್ದಿಷ್ಟ ಉಲ್ಲೇಖವಿಲ್ಲ, ಆದರೆ ಇದೇ ಸುವಾರ್ತೆಯ ಭಾಗವನ್ನೇ ಅಪೋಸ್ತಲರು ಸಾರಿದರು ಎಂಬುದು ಸ್ವಯಂವೇದ್ಯವಾಗಿದೆ. ಉದಾಹರಣೆಗೆ ಅಪೋಸ್ತಲರ ಕೃತ್ಯಗಳ ಈ ಅಧ್ಯಾಯಗಳನ್ನು ನೋಡಬಹುದು–2:38–41, 8:12–13, 36, 9:18, 10:47–48, 16:15, 33, 18:8. ಯೇಸುಕ್ರಿಸ್ತನ ಉದಾಹರಣೆಯನ್ನು ಮತ್ತು ಅವನ ಕಟ್ಟಳೆಗಳನ್ನು ಅನುಸರಿಸುವುದು ಅವನ ಹಿಂಬಾಲಕರಾಗಲು ಇರುವ ಒಂದೇ ಮಾರ್ಗ ಇದಾಗಿದೆ.

## ಯೇಸುಕ್ರಿಸ್ತ ಹಿಂದಿರುಗಿ ಬರುತ್ತಾನೆ :–

ಪೇತ್ರನು ಈಗ ಮತ್ತೊಂದು ಮುಖ್ಯವಾದ ಸಿದ್ಧಾಂತದ ಕಡೆ ಹೊರಳುತ್ತಾನೆ. ಅದೆಂದರೆ ಯೇಸುಕ್ರಿಸ್ತ ಅಕ್ಷರಶಃ ಪರಲೋಕದಿಂದ ಹಿಂದಿರುಗುತ್ತಾನೆ ಮತ್ತು ಭೂಮಿಯ ಮೇಲೆ “**ದೇವರ ರಾಜ್ಯ**”ವನ್ನು ಸ್ಥಾಪಿಸುತ್ತಾನೆ ಎಂಬುದು. ಇದನ್ನೇ “**ಸಮಸ್ತವನ್ನು ಸರಿಮಾಡುವುದು**” ಎಂಬುದಾಗಿ ಪೇತ್ರನು ತಿಳಿಸುತ್ತಾನೆ. ಮತ್ತು ಈ ವಿಷಯವನ್ನು ದೇವರು ಪ್ರವಾದಿಗಳ ಮೂಲಕ ಪ್ರಕಟಪಡಿಸಿರುವುದನ್ನು ಹೇಳುತ್ತಾನೆ.

ಪೇತ್ರನ ಈ ಮಾತಿಗೆ ಒಳ್ಳೇ ಉದಾರಹಣೆ ಯೆಶಾಯ ಪ್ರವಾದಿಯ ಪ್ರವಾದನೆಯಲ್ಲಿದೆ.

ಮುಂಬರುವ ಕಾಲದಲ್ಲಿ ಯುದ್ಧಗಳು ಸಂಪೂರ್ಣವಾಗಿ ತೆಗೆದುಹಾಕಲ್ಪಡುತ್ತವೆ(ಯೆಶಾಯ 2:4) ಮಾತ್ರವಲ್ಲ ಅನ್ಯಾಯ ಮತ್ತು ಹಿಂಸೆ ಕೂಡ ನಿರ್ಮೂಲವಾಗುತ್ತವೆ(ಯೆಶಾಯ 11:2–9). ಆ ಕಾಲದಲ್ಲಿ ಭೂಮಿಯ ಮೇಲಿನ ಮರುಭೂಮಿಗಳು ಹಸಿರಾಗಿ ಹೂಭರಿತವಾಗಿರುತ್ತವೆ. ಹಲವು ಬಗೆಯ ಅಶಕ್ತತೆಗಳು ತೆಗೆದು ಹಾಕಲ್ಪಡುತ್ತವೆ ಮತ್ತು ಅತ್ಯಾವಶ್ಯಕ ನೈಸರ್ಗಿಕ ಸಂಪತ್ತಾದ ನೀರು ಧಾರಾಳವಾಗಿ ಸಿಕ್ಕುವಂತಾಗುತ್ತದೆ(ಯೆಶಾಯ 35:1–7).

ಈ ಪ್ರವಾದನೆಯಲ್ಲಿ ದುಃಖ ಮತ್ತು ಗೋಳಾಡುವಿಕೆಯ ಮೂಲಗಳು ಹಳೆಯವುಗಳಾಗಿವೆ(ಯೆಶಾಯ 65:17–25). ದೇವರು ಮಹಾಪ್ರವಾದಿ ಮೋಶೆಯ ಮುಖಾಂತರ ವಿವರಿಸಿದ್ದೇನೆಂದರೆ ಮೋಶೆಯಂಥ, ಆದರೆ ಅತನಿಗೂ ಹೆಚ್ಚಿನ ಅಧಿಕಾರಯುಕ್ತವಾಣಿಯ ಮತ್ತೊಬ್ಬ ಪ್ರವಾದಿಯನ್ನು ಕಳುಹಿಸುವ ಉದ್ದೇಶ ತನಗಿದೆ ಎಂದು. ಆ ಪ್ರವಾದಿ ಯೇಸುವೇ ಎಂಬುದನ್ನು ಪೇತ್ರನು ಸ್ಪಷ್ಟವಾಗಿ ಒತ್ತಿಹೇಳುತ್ತಾನೆ. ಮತ್ತೊಂದು ವಿಷಯವೆಂದರೆ ಮೋಶೆಯ ನಂತ ಬಂದ ಪ್ರವಾದಿಗಳೂ ಈ ಭಾವನೆಗಳನ್ನು ಅನುಮೋದಿಸಿದರು. ಅವರು ಹೇಳುತ್ತಿದ್ದುದು ಇದೇ. ಯೇಸುಕ್ರಿಸ್ತನ ಜೀವನ ಮತ್ತು ಕಾರ್ಯಗಳು ಇಡೀ ಹಳೇಒಡಂಬಡಿಕೆಯಲ್ಲಿ ಉಲ್ಲೇಖಗೊಂಡಿವೆ. ಅಥವಾ ನಾವು ಹೀಗೂ ಹೇಳಬಹುದು–"ಕ್ರಿಸ್ತನು ಇಡೀ ಸತ್ಯವೇದದಲ್ಲಿ ಇದ್ದಾನೆ".

## ಅಬ್ರಹಾಮನಿಗೆ ಮಾಡಿದ ವಾಗ್ದಾನಗಳು :–

ಕೊನೆಯದಾಗಿ, ಪೇತ್ರನು ಆದಿಕಾಂಡದಲ್ಲಿ ಅಂಕಿತವಾದ ಮೂಲಪಿತೃವಾದ ಅಬ್ರಹಾಮನೊಡನೆ ದೇವರು ಮಾಡಿಕೊಂಡ ಒಡಂಬಡಿಕೆಯನ್ನು ತಮ್ಮ ಶ್ರೋತೃಗಳಿಗೆ ನೆನಪಿಸುತ್ತಾನೆ–

"ನೀನು ನನ್ನ ಮಾತನ್ನು ಕೇಳಿದ್ದರಿಂದ ಭೂಮಿಯ ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿಯ ಮೂಲಕ ಆಶೀರ್ವಾದವುಂಟಾಗುವುದು" (ಆದಿಕಾಂಡ 22:18).

ಈ ವಾಗ್ದಾನ ಅಬ್ರಹಾಮನ ನೈಸರ್ಗಿಕ ವಂಶಜರಿಗೆ ಮಾತ್ರ ಸೀಮಿತವಾಗಿರದೆ, ಎಲ್ಲಾ ದೇಶಗಳವರಿಗೆ ಅನ್ವಯಸುತ್ತದೆ. ಅಪೋಸ್ತಲನಾದ ಪೌಲನು ಗಲಾತ್ಯದವರಿಗೆ ಬರೆದ ಪತ್ರಿಕೆಯಲ್ಲಿ ಹೇಳಿದಂತೆ(ಗಲಾತ್ಯ 3:27–29) ಅದೊಂದು ಸಾರ್ವತ್ರಿಕ ಸುವಾರ್ತೆಯಾಗಿತ್ತು ಎಂಬುದನ್ನು ತಿಳಿಸಿಕೊಡುತ್ತಾನೆ. ದೇವರ ವಾಗ್ದಾನವು ನೆರವೇರುವುದನ್ನು ಕಾಣುವವರಲ್ಲಿ ಮೊದಲಿಗರಾಗಿದ್ದು ತಮಗೆ ಸಿಕ್ಕ ದೇವರ ಕೃಪೆಯೆಂದು ದೇವಾಲಯದ ಅಂಗಳದಲ್ಲಿ ಪೇತ್ರನು ಸುವಾರ್ತೆಯ ಮಹತ್ವವನ್ನು ಯೆಹೂದ್ಯರಿಗೆ ಸಾರುತ್ತಾ ಒತ್ತಿಹೇಳಿದನು.

ಪೇತ್ರನ ಈ ವಿಷಯವಾದ ಮಾತುಗಾರಿಕೆ ಅಂತಿಮ ಹಂತಕ್ಕೆ ತಲುಪಿದಾಗಲೇ, ದೇವಾಲಯದ ಅಧಿಕಾರಿಗಳು ಕಳುಹಿಸಿದ ಭಟರ ತುಕಡಿ ಬಂದು ಈ ಕಾರ್ಯಕ್ಕೆ ಅಡ್ಡಿಯುಂಟಾಯಿತು. ಆಮೇಲೆ ಏನಾಯಿತು ಎಂಬುದನ್ನು ದೇವರ ಚಿತ್ತವಿದ್ದರೆ ಮುಂದಿನ ಸಂಚಿಕೆಗಳಲ್ಲಿ ತಿಳಿದುಕೊಳ್ಳೋಣ

*–ಜಾನ್ ಹೆಲವೆಲ್*

• • • • • • • • • • • •



# ಕೃತ್ಯಗಳು ಮಾತಾಡುತ್ತವೆ......

## (ಲಘು ಧ್ಯಾನ)

"ಮಾತುಗಳಿಗಿಂತಲೂ ಕೃತ್ಯಗಳು ಮಾತಾಡುತ್ತವೆ" ಎಂಬುದು ಒಂದು ಹಳೆಯ ಗಾದೆ. ಇದನ್ನು ನಾವು ಚಿಕ್ಕ ವಯಸ್ಸಿನಿಂದಲೇ ಕೇಳಿದ್ದೇವೆ. ಇದರಲ್ಲಿನ ಸತ್ಯತೆಯ ಬಗ್ಗೆ ಯಾವುದೇ ತರ್ಕಗಳಿಲ್ಲ. ಆದರೆ ನಮ್ಮ ಮಾತುಗಳೇ ಒಂದಾಗಿದ್ದರೆ, ನಮ್ಮ ಕೃತ್ಯಗಳೇ ಅಥವಾ ಕಾರ್ಯಗಳು ಬೇರೆಯೇ ಆಗಿರುತ್ತವೆ. ಅಂದರೆ ಹೇಳುವುದು ಒಂದು ಮಾಡುವುದು ಮತ್ತೊಂದು.

ಇದರಿಂದ ನಾವು ಯಾರನ್ನು ಮೂರ್ಖರನ್ನಾಗಿ ಮಾಡಲು ಹೊರಟಿದ್ದೇವೆ ಎಂಬುದನ್ನು ಕುರಿತು ಯೋಚಿಸಿದಾಗ ನಮಗೆ ವಿಸ್ಮಯವಾಗುತ್ತದೆ. ನಿಜವಾಗಿಯೂ ದೇವರನ್ನು ಮೋಸಗೊಳಿಸಲು ಸಾಧ್ಯವಿಲ್ಲ, ನಮ್ಮ ಕುಟುಂಬ ಸದಸ್ಯರೂ, ಗೆಳೆಯರೂ ನಮ್ಮ ಸಂಗಡ ಇದ್ದಾರೆ, ಆದದರಿಂದ ನಾವು ಹುಡುಗಾಟ ಆಡುವುದು ನಮ್ಮ ಸ್ವಂತ ನಮ್ಮೊಂದಿಗೇನೆ.

ನಮ್ಮ ಜೀವನದಲ್ಲಿ ಸತ್ಯವೇ ಸರ್ವೋತ್ತಮವೆಂದು ನಾವು ಹೇಳಲೂಬಹುದು. ನಮ್ಮ ಪೂರ್ಣ ಹೃದಯದಿಂದ ಕರ್ತನನ್ನು ಪ್ರೀತಿಸುತ್ತೇವೆ ಎಂದು ಕೊಚ್ಚಿಕೊಳ್ಳಲೂಬಹುದು; ಆದರೆ ಸತ್ಯವೇದ ಅಧ್ಯಯನ ಕೂಟಕ್ಕೆ ಆಹ್ವಾನ ಬಂದರೆ ಅಥವಾ ಸತ್ಯವೇದ ಪಾಠಗಳನ್ನು ಕುರಿತು ಉಪನ್ಯಾಸಕ್ಕೆ ಹೋಗಬೇಕಾದ ಸಂದರ್ಭ ಬಂದಾಗ ನಾವು ಅಲ್ಲಿಗೆ ಹೋಗುವ ಬದಲಾಗಿ ನಮ್ಮ ಕಾರ್ಯಗಳಲ್ಲೇ ನಿರತರಾಗುತ್ತೇವೆ. ಅಥವಾ ಬೇರೆ ಏನಾದರೂ ನೆಪಹೇಳಿ ತಪ್ಪಿಸಿಕೊಂಡುಬಿಡುತ್ತೇವೆ ಅಲ್ಲವೇ?

ದೂರದರ್ಶನ(ಟಿ.ವಿ.) ಒಂದು ಮನೋಹರ ಸಾಧನವೆಂದು ಬೇರೆಯವರ ಕಿವಿಗೆ ನಾವು ಹೇಳುತ್ತೇವೆ. ಅದನ್ನು ನೋಡುವುದು ಒಂದು ಭಯಾನಕ ಸಮಯ ನಷ್ಟ! ಇದು ಗೊತ್ತಾದ ಮೇಲೂ ನಾವು ಹೆಚ್ಚಾಗಿ ವಿಕ್ಷಿಸುವುದು ಇಲ್ಲ! ಆದರೆ ತಾವು ನೋಡಿದ ಒಂದು ಶೋ(ಕಾರ್ಯಕ್ರಮ)ದ ವಿಷಯವಾಗಿ ಒಬ್ಬರು ಕೊಚ್ಚಿಕೊಳ್ಳುವಾಗ ನಾವು ನೋಡಿದ್ದಾಗಿ ತಲೆ ಅಲುಗಾಡಿಸುತ್ತೇವೆ. ಆದರೆ ತತ್‌ಕ್ಷಣ ನಾವು ನೋಡಿದ ಇನ್ನೊಂದು ಕಾರ್ಯಕ್ರಮವನ್ನು ವರ್ಣಿಸಿ ಹೇಳಲು ಪ್ರಾರಂಭಿಸುತ್ತೇವೆ.

ಇವುಗಳಲ್ಲಿ ಏನಾದರೂ ಮಾಡುವುದಕ್ಕೂ ಮಾಡದಿರುವುದಕ್ಕೂ ನಮ್ಮದೇ ಆದ ಕಾರಣಗಳುಂಟು. ಈ ಕಾರಣಗಳನ್ನು ನಮ್ಮೊಳಗೇ ಇಟ್ಟುಕೊಂಡು ನೆಪಗಳ ಸರಮಾಲೆಯನ್ನೇ ನಾವು ಒಪ್ಪಿಸುತ್ತೇವೆ. ಒಂದು ಮಗು ಹೀಗೆ ಮಾಡುವಾಗ ನಾವು ಗದರಿಸುತ್ತೇವೆ, ಆದರೆ ನಾವು ಮಕ್ಕಳಾಗೇ ಇರಬಾರದು ಬೆಳೆಯಬೇಕಾಗಿದೆ. ಅದಕ್ಕಾಗಿ ಪೌಲನು ಹೀಗೆ ತಿಳಿಸಿದ್ದಾನೆ: "ನಾನು ಬಾಲಕನಾಗಿದ್ದಾಗ ಬಾಲಕನ ಹಾಗೆ ಮಾತಾಡಿದೆ, ಬಾಲಕನ ಹಾಗೆ ತಿಳಿದುಕೊಂಡೆ, ಬಾಲಕನ ಹಾಗೆ ನೆನೆಸಿಕೊಂಡೆ ಆದರೆ ನಾನು ವಯಸ್ಕನಾದಾಗ ನಾನು ಶಿಶುಭಾವವನ್ನು ತೊರೆದುಬಿಟ್ಟೆ".

ನಾವು ನಮಗೆ ನಂಬಿಕಸ್ತರಾಗಬೇಕು, ನಾವು ಮಾತಾಡುವದಕ್ಕಿಂತಲೂ ಹೆಚ್ಚಿನ ಶಬ್ಧದಲ್ಲಿ ನಮ್ಮ ಕೃತ್ಯಗಳು ಮಾತಾಡುತ್ತವೆ ಎಂದು ನಾವು ತಿಳಿಯಲೇಬೇಕು.

ನಾವು ದೇವರನ್ನು ಪೂರ್ಣ ಹೃದಯದಿಂದಲೂ ಪ್ರೀತಿಸುತ್ತೇವೆ ಎಂದು ಹೇಳುವುದು ಅವಶ್ಯವಿಲ್ಲ. ಏಕಂದರೆ ಹಾಗೆ ನಾವು ಪ್ರೀತಿಸುತ್ತಿದ್ದರೆ ನಾವು ಮಾಡುವ ಕೃತ್ಯಗಳಿಂದಲೇ ಅದು ಚೆನ್ನಾಗಿ ತಿಳಿದುಬರುತ್ತದೆ.

ಮನೆಮೇಲೆ ನಿಂತುಕೊಂಡು ನಾವು ಎಷ್ಟು ಹೆಚ್ಚಾಗಿ ದೇವರನ್ನು ಪ್ರೀತಿಸುತ್ತೇವೆ ಎಂದು ಕೂಗಬಹುದು, ಆದರೆ ನಮ್ಮ ಜೀವನದಲ್ಲಿ ದೇವರ ಚಿತ್ತ ಇಲ್ಲದಿದ್ದಲ್ಲಿ ಆ ಕೂಗು ಇತರರಿಗೆ ತಲುಪುವುದಿಲ್ಲ.

"ಕ್ರಿಯೆಗಳು ಇಲ್ಲದಿದ್ದಲ್ಲಿ ನಂಬಿಕೆಯು ತನ್ನಲ್ಲಿ ನಿರ್ಜೀವವಾಗಿದೆ, ಹೀಗಲ್ಲವಾದರೆ ಒಬ್ಬ ಮನುಷ್ಯನು–ನಿನಗೆ ನಂಬಿಕೆ ಉಂಟು, ನನಗೆ ಕ್ರಿಯೆಗಳುಂಟು; ನಾನು ನನ್ನ ಕ್ರಿಯೆಗಳ ಮುಖಾಂತರ ನನ್ನ ನಂಬಿಕೆಯನ್ನು ನಿನಗೆ ತೋರಿಸುತ್ತೇನೆ. ನೀನು ಕ್ರಿಯೆಗಳಿಲ್ಲದೆ ನಿನ್ನ ನಂಬಿಕೆಯನ್ನು ನನಗೆ ತೋರಿಸು ನೋಡೋಣ" ಎಂಬುದಾಗಿ ಯಾಕೋಬನು ಕ್ರಿಯೆಗಳ ಮಹತ್ವವನ್ನು ಕುರಿತು ತಿಳಿಸಿಕೊಡುತ್ತಾನೆ.



ನಮಗೆ ನಿರ್ಜೀವವಾದ ನಂಬಿಕೆಯಲ್ಲ, ಸಜೀವವಾದ ನಂಬಿಕೆಯೇ ಬೇಕಾಗಿದೆ. ಕೃತ್ಯವೂ ಕಾರ್ಯಗಳೂ ಇಲ್ಲದಿರುವ ನಂಬಿಕೆ ಸತ್ತದ್ದು. ಯೇಸು ಇದನ್ನು ಇನ್ನೊಂದು ರೀತಿಯಲ್ಲಿ ಹೇಳಿದ್ದಾನೆ: "ಅವುಗಳ ಫಲಗಳಿಂದ ನೀವು ಅವುಗಳನ್ನು ತಿಳಿದುಕೊಳ್ಳುವಿರಿ". ಯೇಸು ನೋಡಿದ ಅಂಜೂರದ ಮರ ಎಲೆಗಳಿಂದ ತುಂಬಿತ್ತು ಆದರೆ ಫಲವಿರಲಿಲ್ಲ; ಅದೇತರಹದ ಮನುಷ್ಯನು ಮಾತುಗಳಿಂದ ತುಂಬಿರುತ್ತಾನೆ, ಆದರೆ ಕೃತ್ಯಗಳಿರುವುದಿಲ್ಲ. ಯೇಸು ಆ ಮರವನ್ನು ಶಪಿಸಿದದು ಆ ಮರ ಒಣಗಿ ಹೋಯಿತು. ನಾವು ಇದನ್ನು ಜ್ಞಾಪಕ ಮಾಡಿಕೊಳ್ಳೋಣ.

ಯೇಸು ದ್ರಾಕ್ಷೇ ತೋಟದ ಒಡೆಯನು ನಾವು ಮರಗಳು. ನಮ್ಮಲ್ಲಿ ಯಾವ ತರಹದ ಫಲವಿದೆ ಎಂದು ನೋಡಲು ಆತನು ಶೀಘ್ರವಾಗಿ ಬರುತ್ತಾನೆ, ಬಂದಾಗ ಏನು ಕಾಣುತ್ತಾನೋ?

ಎಲೆಗಳಿಂದ ತುಂಬಿದ್ದರೆ ಸಾಲದು ಫಲವಿರಬೇಕು. ಒಳ್ಳೇ ಹೋರಾಟ ಎಂದು ಹೇಳಿದರೆ ಮಾತ್ರ ಸಾಲದು, ಶ್ರೇಷ್ಟ ಹೋರಾಟವನ್ನು ಮಾಡಿದ್ದೇನೆ ಎಂದು ಪೌಲನು ಹೇಳಿದನು, ಅದು ಕೃತ್ಯದ ಸೂಚನೆ. ನೆನಪಿಸಿಕೊಳ್ಳಿ **"ಮಾತುಗಳಿಗಿಂತಲೂ ಕೃತ್ಯಗಳು ಹೆಚ್ಚಿನ ಧ್ವನಿಯಲ್ಲಿ ಮಾತಾಡುತ್ತವೆ"**, ನಮ್ಮ ಕೃತ್ಯಗಳು ಏನು ಹೇಳುತ್ತವೆ?



# ಫರೋಹನ ಪಾನ ಸೇವಕ

## (ಆ ದಿನಗಳು ನನ್ನನ್ನು ಬದಲಾವಣೆ ಮಾಡಿದವು)

ಒಂದು ದಿನ ಬೆಳಗಿನ ಜಾವದಲ್ಲಿ ಐಗುಪ್ತದ ಅರಸನಿಗೆ ಬೆಳಿಗ್ಗೆ ಕುಡಿಯಲು ಕೊಡುವುದಕ್ಕಾಗಿ ಅರಮನೆ ಪ್ರವೇಶ ಮಾಡಿದಾಗ ಭಯಂಕರವಾದ ಆತಂಕಕ್ಕೆ ಒಳಗಾದೆ ತಕ್ಷಣವೇ ಸಿಪಾಯಿಗಳು ಮಾರ್ಗದಲ್ಲಿ ತಡೆದರು ಅವರು ತಮಾಷೆ ಮಾಡುತ್ತಿದ್ದಾರೆಂದು ತಿಳಿದೆ. ಒಂದು ಘಂಟೆಯಲ್ಲಿಯೇ ನಾನು ಹೊಲಸು ವಾಸನೆಯ ಬಂದಿಖಾನೆಯಲ್ಲಿ ಪ್ರಸಿದ್ಧ ರೊಟ್ಟಿ ಮಾಡುವವನೊಂದಿಗೆ ಇರಬೇಕಾಯಿತು. ಇಲ್ಲ ಫರೋಹನ ಜೀವಿತದ ಒಂದು ವಿರೋಧತ್ವ ಕಾಣುತ್ತಿತ್ತು ಮತ್ತು ಒಳಸಂಚಿನಿಂದ ಇವರನ್ನು ಬಂಧಿಸಲಾಗಿದೆ ಎಂದು ಅಧಿಕಾರಿ ವರ್ಗದವರಿಗೆ ಖಚಿತವಾಗಿ ಗೊತ್ತಾಗಲಿಲ್ಲ.

ನನಗೆ ಗೊತ್ತಿತ್ತು ನಾನು ಯತಾರ್ಥನಾಗಿದ್ದೇನೆಂದು. ಆದರೆ ಅದು ಚಿಕ್ಕ ಸಹಾಯವಾಗಿತ್ತು. ವಿಶ್ವಾಸಘಾತ ಎಂದು ಕಂಡು ಹಿಡಿಯಲ್ಪಟ್ಟರೆ ಕೆಲವೇ ದಿನಗಳಲ್ಲಿ ನಾನು ಸಾಯಬಹುದು. ಹೇಗೋ ಅಲ್ಲಿ ಒಬ್ಬ ಯೋಸೇಫನೆಂಬ ಇಬ್ರಿಯ ಯೌವ್ವನಸ್ಥನಿದ್ದನು, ಆತನನ್ನು ನೋಡಿದರೆ ಅವನು 20ರ ಪ್ರಾಯದವನಾಗಿದ್ದನು. ಬಂಧಿಖಾನೆಯಲ್ಲಿ ನಮ್ಮ ಸೇವಕನಂತೆ ತೋರಿಸಿಕೊಂಡನು ಆತನು ಕಾರಾಗೃಹದ ಅಧಿಕಾರಿಗಿಂತ ಹೆಚ್ಚಿನವನಾಗಿದ್ದನು. ಆತನು ಎಲ್ಲಾ ಕಾರ್ಯಗಳನ್ನು ಸರಳವಾಗಿ ನಡೆಸುತ್ತಿದ್ದನು, ಎಲ್ಲರು ಅವನಂತೆ ಇರಲು ಇಚ್ಛಿಸುತ್ತಿದ್ದರು. ಆತನು ಕೂಡ ಸೆರೆಮನೆಯಲ್ಲಿ ಇದ್ದನು ಯಾಕಂದರೆ ಸುಳ್ಳು ಆಪಾದನೆಯ ನಿಮಿತ್ತ ಇರಬೇಕಾಯಿತು, ಈತನ ಮೇಲೆ ತಪ್ಪು ಹೊರಿಸಿದವನು ಈತನನ್ನು ಕ್ಷಮಿಸಿ ಇಲ್ಲಿಯೇ ಬಿಟ್ಟಿದ್ದಾನೆ.

## ಕನಸಿನ ಅರ್ಥವನ್ನು ಹೇಳುತ್ತಿರುವವನು :–

ಕೆಲವು ವಾರಗಳ ನಂತರ ಅಧಿಕಾರಿಗಳು ನಮಗೂ ಕೂಡ ಕ್ಷಮಿಸಬಹುದು ಎಂದುಕೊಂಡೆ, ಮತ್ತು ನಾನು ತುಂಬಾ ಚಿಂತಿತನಾದೆ. ಒಂದು ರಾತ್ರಿಯಲ್ಲಿ ಒಂದು ಕನಸನ್ನು ಕಂಡೆನು. ಆ ಕನಸನ್ನು ನಾನು ನನ್ನ ಜೊತೆಸೆರೆಯವನಾದ ಫರೋಹನ ಅಡುಗೆಯವನಿಗೆ ಹೇಳಿದೆ. ಅವನಿಗೂ ಕೂಡ ಅದೇ ರಾತ್ರಿಯಲ್ಲಿ ಒಂದು ಕನಸು ಬಿದ್ದಿತ್ತು, ಅದರಲ್ಲಿ ಅಡುಗೆಯವನ ತಲೆಯ ಮೇಲಿನ ಪುಟ್ಟಿಯಲ್ಲಿದ್ದ ಆಹಾರವನ್ನು ಪಕ್ಷಿಗಳು ಹೆಕ್ಕಿ ತಿನ್ನುತ್ತಿದ್ದವು ಎಂದು ತಿಳಿಸಿದನು.

ನಾವು ತುಂಬಾ ಚಿಂತಿತರಾಗಿರುವುದನ್ನು ಯೋಸೇಫನು ಗುರುತಿಸಿದನು. ನಾವು ಆತನಿಗೆ ನಮಗೆ ಏನೂ ತೋಚುತ್ತಿಲ್ಲ ದಯಮಾಡಿ ನಮಗೆ ಸಹಾಯ ಮಾಡು ಎಂದು ಬೇಡಿಕೊಂಡೆವು. ನಾನು ನನ್ನ ಕನಸನ್ನು ಯೋಸೇಫನಿಗೆ ತಿಳಿಸುತ್ತಾ, ನನ್ನ ಕನಸಿನಲ್ಲಿ ಮೂರು ದ್ರಾಕ್ಷಿ ಗೊಂಚಲುಗಳಿದ್ದು ನಾನು ಅವುಗಳನ್ನು ತೆಗೆದು ರಸವನ್ನು ತೆಗೆದು ಫರೋಹನಿಗೆ ಕೊಟ್ಟೆನು ಎಂಬುದಾಗಿ ತಿಳಿಸಿದೆನು. ಈ ವಿಷಯವಾಗಿ ದೇವರು ಯೋಸೇಫನಿಗೆ ಅದರ ಅರ್ಥವನ್ನು ತಿಳಿಸಿದನು. ಆಗ ಯೋಸೇಫನು ನನಗೆ ಕನಸು ತುಂಬಾ ಒಳ್ಳೆಯದಾಗಿದೆ ಮತ್ತು



ಸರಳವಾಗಿದೆ. ಆ ಮೂರು ಗೊಂಚಲುಗಳೇ ಮೂರು ದಿನಗಳು, ಆ ಮೂರು ದಿನಗಳ ನಂತರ ಫರೊಹನು ನಿನ್ನನ್ನು ಸೆರೆಯಿಂದ ಬಿಡಿಸುವನು ಮತ್ತು ನೀನು ಮೊದಲಿನಂತೆಯೇ ಅರಸನ ಪಾನಸೇವಕನಾಗುವಿ ಎಂದು ತಿಳಿಸಿದನು. ಜೊತೆಗೆ ನೀನು ಅಧಿಕಾರಕ್ಕೆ ಮರಳಿದಾಗ ನನ್ನನ್ನು ನೆನಪು ಮಾಡಿಕೊಂಡು ಬಿಡಿಸು ಎಂದೂ ಸಹ ಹೇಳಿದನು.

ಅದೇರೀತಿ ಫರೋಹನ ಅಡುಗೆಯವನ ಕನಸಿನ ಅರ್ಥವನ್ನೂ ಸಹ ತಿಳಿಸಿದನು. ತಲೆಯ ಮೇಲಿನ ಮೂರು ಪುಟ್ಟಿಗಳು ಮೂರು ದಿನಗಳು ಆ ಮೂರು ದಿನಗಳು ಕಳೆದ ನಂತರ ಪಕ್ಷಿಗಳು ಆಹಾರವನ್ನು ಹೆಕ್ಕಿ ತೆಗೆದಂತೆ, ಅಡುಗೆಯವನ ತಲೆಯನ್ನು ತೆಗೆಸಿ ಮರಕ್ಕೆ ನೇತುಹಾಕಿಸುವನು ಪಕ್ಷಿಗಳು ನಿನ್ನ ಮಾಂಸವನ್ನು ತಿನ್ನುವುವು ಎಂಬುದೇ. ಯೋಸೇಫನು ತಿಳಿಸಿದಂತೆ ಮೂರು ದಿನಗಳ ನಂತರ ನಾನು ನಿರಪರಾಧಿ ಎಂದು ನಿರ್ಣಯಿಸಲ್ಪಟ್ಟು ಅರಮನೆಗೆ ನನ್ನ ಕೆಲಸಕ್ಕೆ ಹಿಂತಿರುಗಿದೆನು. ಆದರೆ ಅಡುಗೆಯವನು? ಯೋಸೇಫನು ತಿಳಿಸಿದಂತೆ ಅವನ ಕನಸು ಸಹ ನಿಜವಾಗಿತ್ತು, ಅರಸನು ಅಡುಗೆಯವನ ತಲೆಯನ್ನು ತೆಗಿಸಿ, ಅವನನ್ನು ಮರಕ್ಕೆ ನೇತುಹಾಕಿಸಿದನು.

## ಯೋಸೇಫನ ಸ್ಥಿತಿ ಏನಾಯಿತು?

ಈ ಒಂದು ಆಶ್ಚರ್ಯಕರ ಘಟನೆಯಿಂದ ನಾನು ಮತ್ತೆ ಅರಸನ ಸನ್ನಿಧಿಗೆ ಸೇರಿದೆನು. ಆದರೆ ನನಗೆ ಒಳ್ಳೆಯ ವಿಷಯವನ್ನು ತಿಳಿಸಿದ ಯೋಸೇಫನಿಗೆ ಕೃಪೆ ತೋರಿಸುವುದಕ್ಕೆ ಬದಲಾಗಿ ನಾನು ಅವನನ್ನು ಮರೆತುಬಿಟ್ಟೆನು. ಈ ಸಂಗತಿಯನ್ನು ನಾನು ಸರಿ ಸುಮಾರು ಎರಡು ವರ್ಷಗಳ ಕಾಲ ನನ್ನ ನೆನಪಿಗೆ ತರಲಿಲ್ಲ. ಕಾಲ ಹೀಗೆ ಕಳೆಯುತ್ತಿರುವಾಗ ಮತ್ತೆ ಯೋಸೇಫನನ್ನು ನೆನಪು ಮಾಡಿಕೊಳ್ಳುವ ಸಮಯ ಬಂದಿತು. ಅರಸನಾದ ಫರೋಹನಿಗೆ ಒಂದು ರಾತ್ರಿ ಒಂದು ವಿಶೇಷವಾದ ಕನಸು ಬಿತ್ತು-ಅವನ ಕನಸಿನಲ್ಲಿ ಆತ ನೈಲ್ ನದಿಯ ದಡದಲ್ಲಿ ನಿಂತಿದ್ದಾಗ ಏಳು ಕೊಬ್ಬಿದ ಆಕಳುಗಳು ಬಂದವು, ಆನಂತರ ಮೈ ಒಣಗಿ ಬಾಡಿಹೋದ ಏಳು ಆಕಳುಗಳು ಬಂದವು. ಈ ಬಡಕಲಾಗಿದ್ದ ಆಕಳುಗಳು ಕೊಬ್ಬಿದ ಆಕಳುಗಳನ್ನು ತಿಂದುಬಿಟ್ಟವು ಆದರೆ ಅವುಗಳಲ್ಲಿ ಯಾವುದೇ ಬದಲಾವಣೆ ಕಂಡುಬರಲಿಲ್ಲ. ಇದರಿಂದ





ಅರಸನು ಗೊಂದಲಕ್ಕೆ ಈಡಾದನು, ಇದರ ಅರ್ಥವನ್ನು ಆಸ್ಥಾನದಲ್ಲಿದ್ದ ಯಾವ ಪಂಡಿತರೂ, ಶಾಕುನಿಕರೂ, ಜೋಯೀಸರು ಹೇಳಲು ಸಾಧ್ಯವಾಗಲಿಲ್ಲ. ಫರೋಹನು ಬಹಳ ಚಿಂತಿತನಾದನು.

ಆಗ ನನಗೆ ಸೆರೆಮನೆಯಲ್ಲಿದ್ದ ಯೋಸೇಫನ ನೆನಪಾಯಿತು, ಆತ ನನಗೆ ಕನಸಿನ ಅರ್ಥವನ್ನು ಹೇಳಿ ಸಹಾಯ ಮಾಡಿದ್ದು ನನ್ನ ನೆನಪಿಗೆ ಬಂತು ಮತ್ತು ನಾನು ಇಷ್ಟು ದಿವಸ ಅವನಿಗೆ ಸಹಾಯ ಮಾಡದೆ ಇದ್ದದ್ದಕ್ಕೆ ನನಗೆ ಬೇಸರವಾಯಿತು. ಕೂಡಲೆ ನಾನು ಈ ವಿಷಯವನ್ನು ಫರೋಹನಿಗೆ ತಿಳಿಸಿದೆನು.

## ಪ್ರಧಾನ ಮಂತ್ರಿ :-

ಯೋಸೇಫನು ಪ್ರಧಾನ ಮಂತ್ರಿಯಾಗಿ ಇಡೀ ದೇಶವನ್ನು ಮುನ್ನೆಡಿಸುತ್ತಿದ್ದಾನೆ, ನನ್ನ ಜೀವಿತ ಬದಲಾವಣೆಯಾಗಿದೆ. ಫರೋಹನ ಕನಸು ದೇಶದ ಆರ್ಥಿಕ ಪರಿಸ್ಥಿತಿ ಬಗ್ಗೆ ಇದೆ ಎಂದು ಯೋಸೇಫನು ತಿಳಿಸಿದನು. ಅಲ್ಲಿ ಏಳು ವರ್ಷಗಳು ಸುಗ್ಗಿಯಕಾಲ ಮತ್ತು ಆನಂತರ ಏಳು ವರ್ಷಗಳ ಕಾಲ ಬೀಕರ ಬರಗಾಲವಿರುತ್ತದೆ ಎಂದು ತಿಳಿಸಿದನು. ಈಗ ನಾವು ಬರಗಾಲದಲ್ಲಿದ್ದೇವೆ ಯೋಸೇಫನು ಬುದ್ಧಿವಂತ ನಾಯಕನೆಂದು ತೋರಿಸಿಕೊಟ್ಟನು, ಆಹಾರವನ್ನು ಎಲ್ಲಾ ಜನಗಳ ಮಧ್ಯದಲ್ಲಿ ಹಂಚಿಕೊಟ್ಟನು.

ಆತನ ಕುಟುಂಬದವರು ಸಹ ತಿರುಗಿಕೊಂಡರು, ಕನಸುಗಳನ್ನು ಪ್ರಕಟಿಸುವ ಬಲವಾದ ದೇವರನ್ನು ಅವರೆಲ್ಲರು ಆರಾಧಿಸುತ್ತಿದ್ದರು. ನಾನು ಯೋಸೇಫನಿಗೆ ಮತ್ತು ಪರೋಹನಿಗೆ ನಂಬಿಕೆಯಿಂದ ಸೇವೆಮಾಡಲು ಪ್ರಯತ್ನಿಸಿದೆ ದೇವರು ಅವನನ್ನು ಸೆರೆಮನೆಯಿಂದ ಹೇಗೆ ಕಾಪಾಡಿದ, ತನ್ನ ಕುಟುಂಬವನ್ನು ಹೇಗೆ ನಡೆಸಿದ ಎಂಬುದನ್ನು ವಿವರಿಸಿದನು. ಈ ಕಾರ್ಯವೆಲ್ಲವೂ ದೇವರ ಒಂದು ಯೋಜನೆಯಾಗಿದೆ, ಪ್ರಪಂಚದಲ್ಲಿರುವ ಜನರೆಲ್ಲರೂ ಯೋಸೇಫನ ವಿಶೇಷ ಜನರು ದೇವರನ್ನು ಸೇವೆ ಮಾಡುವುದನ್ನು ಅರ್ಥಮಾಡಿಕೊಳ್ಳಲು ಪ್ರಪಂಚದಲ್ಲಿರುವ ಎಲ್ಲಾ ಜನರಿಗೆ ಸಹಾಯ ಮಾಡುವುದು ಇವೆಲ್ಲವುಗಳನ್ನು ನಾನು ಅರ್ಥ ಮಾಡಿಕೊಳ್ಳಲಾರದೆ ಹೋದೆ. ಅಬ್ರಹಾಮನಿಗೆ(ಯೋಸೇಫನ ಅಜ್ಜನ ತಂದೆ) ದೇವರು ಮಾಡಿದ ವಾಗ್ದಾನಗಳಲ್ಲಿ ಕೆಲವನ್ನು ಮಾಡುವುದು. ಆದರೆ ಆತನು ನನ್ನ ಜೀವನ ರಕ್ಷಿಸಿಕೊಳ್ಳಲು ಸಹಾಯ ಮಾಡಿದನು. ಆ ***ದಿನದಿಂದ*** ನಾನು ಯೋಸೇಫನ ದೇವರನ್ನು ಕಂಡುಕೊಳ್ಳಲು ಪ್ರಾರಂಭಿಸಿದೆನು. ಆತನ ಧ್ವನಿ ನಿಜವಾಗಿಯೂ ಆಸಕ್ತಿಯುಳ್ಳದ್ದಾಗಿದೆ.

***-ಸಿಂಥಿಯಾ ಮೈಲ್ಸ್***